ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೨೫—೧೧—೧೯೩೮. ಸಂಪುಟ ೧೮] [ಸಂಚಿಕೆ ೨೫

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund.
1931	2,26,82,430	2.91,880	33,24,809
1933	3,07,98,435	3,54,003	50.04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8243.]

16

Bombay Life Building Udipi	Gautam Nivas Charni Road Girgaum, Bombay 4	Visweswarapuram Circle, Bangalore City	Futhiyara, Calicut	Car Street, Mangalore	Ottapalam S. Malabar.	Central Station Road, Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital .... Rs. 3,03,205/-
Reserves .... „ 3,88,842/-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-51

V. R. Kamath, B. A., LL. B.,
Manager.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ .

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವ ಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಘಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural &
Industrial Bank Ltd

52–26

ರುಂಡೂರವರ	"ZANDU" ರುಂಡೂರವರ
ದ್ರಾಕ್ಷಾಸವ ಮತ್ತು **ಜೀವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸ ಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮ ವಾದದ್ದು. ಕ್ಷಯದ ಪ್ರಾರಂಭಾವಸ್ಥೆ ಯಲ್ಲಿ ದಿವ್ಯವಾದ ಔಷಧ.	**ಕೇಸರಿ ಚೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯ ವಾದ ಔಷಧ. ರುಂಡೂ ಅಯೋಡೈಸ್ಡ್ **ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ರುಂಡೂ ಪ್ಲೋಜಿಸ್ಟೈನ್ .

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–16)

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೫೮— ೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೮—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೬೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12–10

ವಿವಿಧ ವಿಚಾರ.

ಪೊಲೀಸರೇಕೆ?

ಶ್ರೀಮತಿ ಮೋನ್‌ತ್ಯಾಬ್ಜಿಯವರು ಬಿಹಾರಿನಲ್ಲಿ ದ್ದಾಗ 10 ರೂ. ಗಳನ್ನು ಕಳೆದುಕೊಂಡರು; ಅಂದರೆ ನುನೆಯಲ್ಲಿಟ್ಟದ್ದು ಯಾರೋ ತೆಗೆದುಬಿಟ್ಟರು. ಆಗ ಜವಾನರಲ್ಲದೆ ಮತ್ಯಾರೂ ಬಂದರಲಿಲ್ಲ. ಪ್ರನೂಣಿಕ ಸೇವಕನೊಬ್ಬನು ಓರ್ವ ಹಕೀಮನನ್ನು ಕರೆದುಕೊಂಡು ಬಂದ.

ಈತನು ಮನೆಯ ಸೇವಕರುಗಳ ಹೆಸರುಗಳಿಲ್ಲವ ನ್ನೂ ಸಣ್ಣ ಸಣ್ಣ ಚೂರು ಕಾಗದದ ಮೇಲೆ ಬರೆದು, ಒಂದು ಆಗಲವಾದ ಬಾಯಿಯುಳ್ಳ ಪಾತ್ರೆಯನ್ನು ತರಿ ಸಿ ಅದರಲ್ಲಿ ನೀರು ಹಾಕಿ, ಈ ಚೀಟಿಗಳನ್ನು ಹಾಕಿದ. ತರುವಾಯ ಖುರಾನಿನ ಕೆಲವು ಭಾಗಗಳನ್ನು ಪಠಿಸು ತ್ತಲೇ ಕಳ್ಳನ ಹೆಸರಿದ್ದ ಚೀಟಿ ಏನಹ ಬೇರೆ ಎಲ್ಲಾ ಚೀ ಟ್ಟಿಗಳೂ ನಿಂತಲ್ಲೇ ನಿಲ್ಲದೆ ತಿರುಗಲಾರಂಭಿಸಿವು. ಆ ನಿಂತಿದ್ದ ಚೀಟಿಯಲ್ಲಿ ಯಾರ ಹೆಸರು ಇತ್ತೋ ಆ ಜ ವಾನನನೇ ಕಳ್ಳತನ ಮಾಡಿರುವುದಾಗಿ ತಿಳಿದು ಬಂದು ದಾಗಿ ಹೇಳಲಾಗಿದೆ. ಇದು ನಿಜವಾಗಿಯೂ ನಡೆ ದದ್ದು. ಹೇಗಿದೆ ಪತ್ತೆ?

—೦೦—

ಬಣ್ಣದ ಹೊಗೆ.

ನೀವು ಯಾವ ಬಣ್ಣದಲ್ಲಿ ಬೇಕಾದರೂ ನಿಮ್ಮ ಸಿಗ ರೇಟಿನ ಹೊಗೆಯನ್ನು ಬಿಡಬಹುದು. ಎಂಥಾ ಸುಸನು ಯ. ನ್ಯೂಯಾರ್ಕಿನ ಒಂದು ಸಿಗರೇಟು ತಯಾರಿಸುವ ಕಂಪೆನಿಯವರು ತಮ್ಮಲ್ಲಿ ತಯಾರಿಸುವ ಮೂಲಿಗೆ ತಕ್ಕ ವ್ಯಾಪಾರವಿಲ್ಲದಿರಲು ಹೊಸ ಉಪಾಯವನ್ನು ಕಂಡು ಹಿಡಿದಿದ್ದಾರೆ.

ಅವರು ಈಗ ತಯಾರಿಸುತ್ತಿರುವ ಈ ಹೊಸ ಸಿಗರೇ ಟುಗಳ ಮೇಲೆ ಸುತ್ತಿರುವ ಕಾಗದಗಳು ಬೇರೆ ಬೇರೆ ಬ ಣ್ಣದವುಗಳಾಗಿರುತ್ತವೆ. ಇವರಿಂದ ಆಯಾಯ ಬಣ್ಣದ ಹೊಗೆಯು ಬರುತ್ತದೆ.

ಅನೇಕರಿಕರು ಸ್ತ್ರೀಯರು ಸಾಯಂಕಾಲವಲ್ಲಿ ತಾ ವು ಧರಿಸುವ ಬಟ್ಟೆಯ ಬಣ್ಣಕ್ಕೆ ಸರಿಯಾದಬಣ್ಣದ ಹೊ ಗೆ ಬರುವ ಸಿಗರೇಟುಗಳನ್ನು ಕೊಂಡುಕೊಳ್ಳುವರಂತೆ.

—೦೦—

ನವಯುಗ ಕುಂಭಕರ್ಣ ವಿರೋಧಿ!

ನಿದ್ದೆ! ಏನು, ಹಾಗೆಂದರೇನು? ಅದು ಹೇಗಿರುವು ದು? ಎಂಬದಾಗಿ ಕಳೆದ 22 ವರ್ಷಗಳಿಂದ ನಿದ್ದೆ ಮಾ ಡದ ನವಯುಗದ ಕುಂಭಕರ್ಣ ವಿರೋಧಿಯೊಬ್ಬನು ಪ್ರಶ್ನಿಸಿದ. ಇದೇನೋ ಹುಚ್ಚಾಟ! ನಿದ್ದೆಯೆಂದರೆ ತಿಳಿ ಯದಿದ್ದ ಮೇಲೆ ನಿನಗೆ ಬುದ್ಧಿ ಇದೆಯೇನೋ ಎಂದು ನಾನು ಕೇಳಿದೆ. ಅದಕ್ಕೆ ಎಂ. ಪಾಲ್‌ಕರ್ನಾ ಎಂಬು ವ ನಿಸ್ಪತ್ತ ಗುಮಾಸ್ತನು ಈ ರೀತಿ ತಿಳಿಸಿದ. ತಾನೂ ತನ್ನ ಮೂರು ಮಕ್ಕಳೂ ಸತಿಯೂ ಬುಡಾಪೆಸ್ಟ್‌ನಗರ ದಲ್ಲಿದ್ದಾಗ 1915ರಲ್ಲಿ ತನ್ನ ತಲೆಗೆ ಪೆಟ್ಟು ತಾಗಲು ಆ ಲಾಗಾಯಿತು ಒಂದು ಸೆಕೆಂಡ್ ಕಾಲವೂ ನಿದ್ದೆ ಬರ ಲಿಲ್ಲವೆಂದು ತಿಳಿಸಿದನು. ಪುಣ್ಯಾತ್ಮ! ಇದೂ ಒಂದು ಪೂರ್ವ ಜನ್ಮದ ಸುಕೃತ.

—೦೦—

ಮೋಟಾರಿನವರು ಬೆದರಬೇಕಾಗಿಲ್ಲ.

ಇನ್ನು ಮುಂದೆ ನೀರೂ ಸಹ ಪೆಟ್ರೋಲಿನಂತೆ ಉ ಪಯೋಗಿಸುವ ಕಾಲ ಬರಬಹುದಾಗಿದೆ. ಏಕೆಂದರೆ ಈಗಾಗಲೇ ಅನೇಕ ಪರಿಶೋಧನೆಗಳು ನಡೆದವೆ. ಇ ದರಿಂದ ಮೋಟಾರು ಯಂತ್ರದಲ್ಲಿ ಕಾರ್‌ಬುರೇಟರ್ ಎಂಬ ಒಂದು ಸಾಧನವನ್ನಿಟ್ಟು, ಇದರಿಂದ ನೀರನ್ನು ವಿ ಭಜಿಸಿ ಆಮ್ಲ ಜನಕ ಮತ್ತು ಜಲ ಜನಕಗಳನ್ನಾಗಿ ಮಾ ರ್ಪಡಿಸಿ, ಜಲ ಜನಕವ ಸಹಾಯದಿಂದ ಯಂತ್ರವು ಮುಂದುವರಿಯುವರೆತೆ ಮಾಡಬಹುದೆಂದು ಟಿಕ್ಸಾಸ್ ಜಿ ಲ್ಲೆಯ ಜಿ. ಹೆಚ್. ಗ್ಯಾರೆಟ್ ಎಂಬಾತನು ತಿಳಿಸಿರುವನು.

—೦೦—

ಪ್ರಕೃತಿಯ ರಿಪೇರಿ.

1933ರಲ್ಲಿ ಬಂದ ಬಿರುಗಾಳಿಯ ದೆಸೆಯಿಂದ ಮೇ ರಿ ಲ್ಯಾಂಡ್‌ನ ಪಿನ್ಸೆಸ್ ಅನ್ನೆ ವಿಂಬಲ್ಲಿ ರೈತನೊಬ್ಬನ ಹೊಲದ ನುರವೊಂದು ಬೇರು ಸಹಿತ ಕೀಳಲ್ಪಟ್ಟತು. ಮೊದಲಿನ ಬಿರುಗಾಳಿ ಬೀಸಿದುದು, ಪೂರ್ವದಿಂದ ಪ ಶ್ಚಿಮಕ್ಕೆ; ಇದೀಗ ಮೊನ್ನೆ—ಮೊನ್ನೆ ಪಶ್ಚಿಮದಿಂದ ಪೂರ್ವಕ್ಕೆ ಭೀಕರ ಬಿರುಗಾಳಿಯು ಬೀಸಿತು. ಈ ಬಿ ರುಗಾಳಿಯ ದೆಸೆಯಿಂದ ಪಶ್ಚಿಮಕ್ಕೆ ಉರುಳಿ ಬಿದ್ದ ಮ ರವು ಎತ್ತಲ್ಪಟ್ಟು ನಿಲ್ಲಿಸಲ್ಪಟ್ಟಿತು. ಮರವು ಯಾವ ಹೊಂಡದಿಂದ ಕೀಳಲ್ಪಟ್ಟತೋ, ಅದೇ ಹೊಂಡದಲ್ಲಿ ಪು ನಹ ನೆಡಲ್ಪಟ್ಟತು. ಇದಕ್ಕೆನ್ನಬೇಕು ಖರ್ಚಿಲ್ಲದ ರಿ ಪೇರಿ.

—೦೦—

ವಿಚಿತ್ರವೆನ್ನುವಿರೋ?

ತನ್ನ ಮಗನಾದ ಹುಮಾಯೂನನಿಗಾಗಿ ಬಾಬರ ನು ತನ್ನ ಪ್ರಾಣವನ್ನು ಅರ್ಪಿಸಿದ್ದನೆಂದು ನಾವು ಚರಿತ್ರೆ ಯಿಂದ ಓದಿ ಬಲ್ಲೆವಷ್ಟೆ. ಅಂಥಾದ್ದೇ ಒಂದು ಕಥೆ ಯು ಫ್ರಕೃತ ನಡೆದಿರುವುದೆಂಬ ವಾರ್ತೆಯು ಡಿಲ್ಲಿಯ ಸಮೀಪದಲ್ಲಿರುವ ಪರ್ಸೂರು ಎಂಬ ಊರಿನಿಂದ ಬಂದಿ ರುತ್ತದೆ.

ಪಂಡಿತ ಅಮರನಾಥ ಶಾಸ್ತ್ರಿಯೆಂಬವರ ದ್ವಿತೀಯ ಪುತ್ರನು ಮರಣೋನ್ಮುಖನಾಗಿ ಮಲಗಿದ್ದನು. ಮಗ ನ ಮೂರನೆಯ ಜನ್ಮದಿನೋತ್ಸವದ ವಿಧಿಗಳನ್ನು ಮುಗಿ ಸಿ, ತಾಯಿಯು ಆತನ ಶಯ್ಯೆಯ ಬಳಿಯಲ್ಲಿ ಕುಳಿತ್ತು ತನ್ನ ಮಗನನ್ನು ಉಳಿಸಬೇಕೆಂದೂ, ತನ್ನನ್ನೂ ಕೊಂಡು ಹೋಗಬೇಕೆಂದೂ ಪರಮಾತ್ಮನೊಡನೆ ಪ್ರಾರ್ಥಿಸಿದಳು.

ಅಂದಿನಿಂದ ಹುಡುಗನ ರೋಗವು ಗುಣವಾಗುತ್ತಾ ಬರತೊಡಗಿತು. ತಾಯಿಯ ಆರೋಗ್ಯವು ಕೆಟ್ಟತು. ದಿನ ಹೋಗುತ್ತಾ ಮಗು ಹೇಗೆ ಹೇಗೆ ಗುಣಹೊಂದ ತೊಡಗಿತನೊ, ತಾಯಿಯ ಪರಿಸ್ಥಿತಿಯು ಹಾಗೆಯೇ ಹಾಳಾಗತೊಡಗಿತು. ಮಗನೀಗ ಸೌಖ್ಯದಲ್ಲಿರುವನು. ತಾಯಿಯ ಮರಣೋನ್ಮುಖಳಾಗಿರುವಳು.

—೦೦—

ಕಣ್ಣಿನ ಕೃಷಿ.

ಮೇರಿ ಲೇಂಡಿನ ಫ್ರೆಂಕ್ ಹೊಫ್‌ಮಾನ್ ಎಂಬಾ ತನನ ಕಣ್ಣಿಗೆ ಕಾರ್ಬೊರೆಕ್ ಎಸಿಡ್ ಮತ್ತು ಸುಣ್ಣದ ವಿಶ್ರಣವು ಬಿದ್ದು, ಕಣ್ಣು ಕುರುಡಾಯಿತು. ಚಿಕಿತ್ಸೆ ಗಾಗಿ ಡಾ. ಪೌಲ್ ಫ್ಲೆಮಿಂಗ್ ಎಂಬವರ ಬಳಿಗೆ ಹೋದನು.

ಅವರು ಹೊಫ್‌ಮನ್‌ನರ ಕಣ್ಣಿನ ಮೇಲೆ ಶಸ್ತ್ರ ಕ್ರಿ ಯೆಯನ್ನು ನಡೆಸಿ, ಪೆಟ್ಟು ತಗಲಿದ ಕೊರ್ನಿಯೊವನ್ನು ತೆಗೆದು ಪುನಹ ಹೊಲಿದು ಬಿಟ್ಟರು. ನಂತರ ಕೆಲಸಕ್ಕೆ ಮನುಷ್ಯನ ಕಣ್ಣನ್ನು ಪಡೆಯಲು ಸಾಧ್ಯವಿಲ್ಲದುದರಿಂ ದ ಆ ಡಾಕ್ಟರರು ಒಂದು ಮೊಲವನ್ನು ಕ್ರಯಕ್ಕೆ ಪಡೆ ದುಕೊಂಡು ಅದರ ಕೊರ್ನಿಯೊವನ್ನು ತೆಗೆದು ಹೊಫ್ ಮಾನನ ಕಣ್ಣಿಗೆ ಕೃಷಿ ಮಾಡಿದರು. ಬಳಿಕ ಕಣ್ಣಿಗೆ ವ ಸ್ತ್ರ ಕಟ್ಟಿ ಕೆಲವು ವಾರಗಳ ತನಕ ಹಾಗೆಯೇ ಬಿಡಲಾ ಯಿತು.

ಕೆಲವು ದಿನಗಳ ಅನಂತರ ಕಣ್ಣಿನ ವಸ್ತ್ರವನ್ನು ತೆಗೆ ದೊಡನೆ ತನಗೆ ದೃಷ್ಟಿಯುಂಟಾದ ಆನಂದದಿಂದ ಹೊ ಫ್‌ಮಾನನು ಕೂಗಿದನು. ಪ್ರತಿಯೊಬ್ಬರಿಗೂ, ಅದರ ಲ್ಲೂ ತನ್ನೀ ನೂತನ ಕ್ರಿಯೆಯು ಜಯಪ್ರದವಾಗಲಿಕ್ಕಿ ಲ್ಲವೆಂದು ಬೆದರುತ್ತಿದ್ದ ಡಾಕ್ಟರರಿಗೂ ಕೂಡ ಪರಮ ಸಂತೋಷವಾಯಿತು.

—೦೦—

ಇಲಿಗೆ ಭ್ರಮೆ ಹಿಡಿಸಿದ ಚಿತ್ರ!

ಒಂದು ಚಿತ್ರದಲ್ಲಿದ್ದ ಸೇಬಿನ ಹಣ್ಣಿನ ಆಕೃತಿಯ ನ್ನು ಕಂಡು, ನಿಜವಾಗಿಯೂ ಸೇಬಿನ ಹಣ್ಣನ್ನು ಇಟ್ಟ ರುವರೆಂಬ ಭ್ರಾಂತಿಯಿಂದ ಎರಡು ಇಲಿಗಳು, ಆಗ ತಾ ನೆ ಬಣ್ಣಗಳಿಂದ ಬರೆದು ಒಣಗಿಸಲು ಬಿಸಿಲಿನಲ್ಲಿಟ್ಟದ್ದ ಚಿತ್ರವನ್ನು ಕಂಡು ಆ ಕಡೆ ಓಡಲಾರಂಭಿಸಿ ಕೊನೆಗೆ ನಿ ರಾಶೆಯಾಗಲು ಆ ಚಿತ್ರವನ್ನು ಕೆಡಿಸಿಬಿಟ್ಟ ಸೋಜಿಗದ ಸುದ್ದಿ ಈಗ ತಾನೇ ಬಂದಿದೆ. ವಾಷಿಂಗ್‌ಟನ್ ಎಂಬ ಲ್ಲಿಯ ವ್ಯವಸಾಯ ಶಾಲೆಯ ವಿದ್ಯಾರ್ಥಿಯಾದ ರಾಯ ಲ್ ಸ್ಟೇಡ್‌ಮೆನ್ ಎಂಬಾತನೇ ಆ ಚಿತ್ರ ನಿರ್ಮಾಪ ಕನೆಂದು ಗೊತ್ತಾಗಿದೆ.

—೦೦—

ಮೂಷಿಕ ಪಾಲನಾಲಯ.

ಐರೋಪ್ಯರಿಗೆ ಆಪ್ತ ಪ್ರಾಣಿಗಳನ್ನು ಸಾಕುವು ದೊಂದು ಹುಚ್ಚು. ಅನೇಕರು ಅನೇಕ ತರದ ಪಕ್ಷಿ ಪ್ರಾಣಿಗಳನ್ನು ಸಾಕಿ ಸಂತೋಷಪಡುವರು. ಇಂಗ್ಲೆಂ ಡಿನ ವಾಟರ್ ಫೋರ್ಡ್ ಪ್ರಾಂತದಲ್ಲಿರುವ ಡ್ರಾಸ್ಟನ್ನ ಲ್ಲಿ ಶ್ರೀಮತಿ ಇ. ಡಿ. ಬ್ಲೂರ್ ಎಂಬಾಕೆಯು 'ಮೌಸರಿ' (ಮೂಷಿಕ ಪಾಲನಾಲಯ)ಯನ್ನು ಇಟ್ಟಿರುವಳು. ಆ ಲ್ಲಿಯ ಇಲಿಗಳಿಗೆ ರಾಜಭೋಗ, ಊಟಕ್ಕೆ ವಿಧ ವಿಧ ಭಕ್ಷ್ಯಗಳೇನು? ವಿಶ್ರಾಂತಿಗಾಗಿ ಮಂಚ ಸುಪ್ಪತ್ತಿಗೆಗಳೇ ನು? ಅವುಗಳ ಪುಣ್ಯವೇ ಪುಣ್ಯ.

—೦೦—

ವಿಚಿತ್ರ ಭ್ರಾತೃವಾತ್ಸಲ್ಯ!

'ಹುಟ್ಟುತ್ತಾ ಅಣ್ಣತಮ್ಮಂದಿರು, ಬೆಳೆಯುತ್ತಾ ದಾ ಯಾದಿಗಳು' ಎಂದು ಗಾದೆಯುಂಟು. ಆದರೆ ಈಗೇ ಕೋ ನನಗೆ ಸ್ವಲ್ಪ ಸಂದೇಹ ಉಂಟಾಗಿದೆ. ಯಾಕೆಂ ದರೆ ಈಗೊಂದು ಭ್ರಾತೃವಾತ್ಸಲ್ಯದ ಸುದ್ದಿ ಬಂದಿರು ವುದರಿಂದ. ಆದನ್ನೇ ಕೇಳಿ. ನಿಮಗೂ ಸಂದೇ ಹ ಹುಟ್ಟುತ್ತೋ ಇಲ್ಲವೋ ಯೋಚಿಸಿ. ಜರ್ಮನಿಯ ನಾಲ್ವರು ಸಹೋದರರೂ ನಾಲ್ವರು ಸಹೋದರಿಯರ ನ್ನೆ ವಿವಾಹವಾದರು. ಆದರೆ ಐದನೆಯವನಿಗೆ ಮಾತ್ರ ಬಹು ನಿರಾಶೆಯಾಯಿತು. ಯಾಕೆಂದರೆ ಸಹೋದರಿ ಯರು ನಾಲ್ವರೇ ಇದ್ದರು. ಇದರಿಂದ ಈತನು ಸನ್ಯಾ ಸತ್ವವನ್ನು ವಹಿಸಿ ಮಠ ಒಂದಕ್ಕೆ ಸೇರಿಬಿಟ್ಟನು. ಇ ವನಿಗೂ ಒಬ್ಬಾಕೆ ಸಿಕ್ಕಿದ್ದರೆ ಆಧುನಿಕ ಪೆಂಚ್ ಪಾಂಡವ ರಂತೆ ಇರ್ಪಬಹುದಾಗಿತ್ತೆನ್ನಿಸುತ್ತದೆ. ಇದು ಕಲಿಯುಗ ವಾದ್ದರಿಂದ ಸತಿಪತಿಗಳು ಐವರೈವರೂ ಸಹೋದರ-ಸ ಹೋದರಿಯರೇ ಆಗಬಾರದೇಕೆ?

—೦೦—

ದೃಷ್ಟಿಗಾಗಿ ವಿಷದ ಉಪಯೋಗ.

ಸರ್ಪವಿಷವನ್ನು ಕಣ್ಣಿನ ಭೇನೆಗಳನ್ನು ಗುಣಪಡಿ ಸುವುದಕ್ಕಾಗಿ ಉಪಯೋಗಿಸಬಹುದೆಂದು ಬ್ರೇಜಿಲಿನ ಪ್ರೊ. ಮೊಕ್ಯಾಯರ್ ಇ. ಆಲ್ವಾರೊ ಎಂಬವರು ಕಂ ಡುಹಿಡಿದಿರುವರು.

ಸರ್ಪದಿಂದ ಚೆನ್ನಾಗಿ ಕಚ್ಚಲ್ಪಟ್ಟವರಲ್ಲಿ ದೃಷ್ಟಿಮಾಂ ದ್ಯ ಇಲ್ಲವೆ ಕೆಲವು ದಿನಗಳ ತನಕ ದೃಷ್ಟಿ ನಷ್ಟ ಉಂಟಾ ಗುವುದೆಂದೂ ಚೆನ್ನಾಗಿ ಕಚ್ಚಲ್ಪಡದವರಲ್ಲಿ, ಅವರಲ್ಲೂ ದೃಷ್ಟಿಮಾಂದ್ಯವಿಲ್ಲದವರಲ್ಲಿ ದೃಷ್ಟಿ ಶುಭ್ರತೆಯುಂಟಾ ಗಿರುವುದೆಂದೂ ಅನೇಕ ಮಂದಿಯೊಡನೆ ವಿಚಾರಿಸಿ ಅವ ರು ತಿಳಿದುಕೊಂಡರು.

ಈ ವಿಷಯವನ್ನೇ ಆಧಾರವಾಗಿಟ್ಟುಕೊಂಡು ಅವ ರು ಶೋಧೆಗಳನ್ನು ನಡಿಸತೊಡಗಿದರು. ದೃಷ್ಟಿ ಶುಭ್ರ ತೆಯನ್ನು ಉಂಟುಮಾಡುವ ವಿಷದಲ್ಲಿರುವ ಆ ಪ ದಾರ್ಥ ಯಾವುದೆಂದು ಈತನಕ ಅವರು ಪತ್ತೆ ಹಚ್ಚಿಲ್ಲ ವಾದರೂ ವಿಷವನ್ನು ತೆಗೆಮಾಡಿ, ಕಣ್ಣಿನ ಕೆಳಭಾಗ ದಲ್ಲಿ ಅದನ್ನು ಇಂಜಕ್ಟ್ ಮಾಡಿ ಅನೇಕರ ದೃಷ್ಟಿಮಾಂ ದ್ಯವನ್ನು ಗುಣಪಡಿಸಿರುವರು.

—೦೦—

ಕೊಡಗಿನ ಚರಿತ್ರೆಯ ಕಥೆಗಳು.

ವೀರರಾಜೇಂದ್ರಪೇಟೆ.

(ಲೇಖಕ:–ಡಿ. ಎನ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖಾಂಕ ೧೪

(ಎಲ್ಲಾ ಹಕ್ಕುಗಳನ್ನು ಕಾಯ್ದಿಡಲ್ಪಟ್ಟಿದೆ.)

ಕ್ರಿ. ಶಕ. 1791 ನೆಯ ಇಸವಿ, ಮೈಸೂರಿನ ಟಿಪ್ಪುಸುಲ್ತಾನನಿಗೂ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ಯುದ್ಧವು ಪ್ರಾರಂಭವಾಗಿತ್ತು. ಗವರ್ನರ್ ಜನರಲನಾದ ಲಾರ್ಡ್ ಕಾರ್ನ್‌ವಾಲಿಸ್ಸನು ಮುಖ್ಯ ಸೈನ್ಯದೊಡನೆ ಬೆಂಗಳೂರಿಗೆ ಬಂದು ಇಳಿದಿದ್ದನು. ಬೊಂಬಾಯಿಯಿಂದ ಇನ್ನೊಂದು ಇಂಗ್ಲಿಷರ ಸೈನ್ಯವು ತಲಚೇರಿಗೆ ಬಂದು ಕೊಡಗಿನ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಹೋಗುತ್ತಲಿತ್ತು. ಈ ಸೈನ್ಯದ ಮುಖ್ಯಾಧಿಕಾರಿಯು ಸರ್ ರಾಬರ್ಟ್ ಅಬರ್‌ಕ್ರಾಂಬಿಯಾಗಿದ್ದನು. ಇದಕ್ಕೆ ಒಂದೆರಡು ವರ್ಷಗಳ ಮೊದಲೇ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ದೊಡ್ಡ ವೀರರಾಜೇಂದ್ರನಿಗೂ ಮೈತ್ರಿಯುಂಟಾಗಿ ಅವರೊಳಗೆ ಪರಸ್ಪರ ಸಹಾಯ ಮಾಡಬೇಕಾಗಿ ಒಪ್ಪಂದವುಂಟಾಗಿತ್ತು. ಈ ಸಮಯದಲ್ಲಿ ಸರ್ ರಾಬರ್ಟ್ ಅಬರ್‌ಕ್ರಾಂಬಿಯು ಸೈನ್ಯ ಸಮೇತ ಹೆಗ್ಗಳದ ಮಾರ್ಗವಾಗಿ ಬಂದು ಅಂಬಟ್ಟಿ ಬೆಟ್ಟದ ಪಶ್ಚಿಮ ಬದಿಯಲ್ಲಿ ತನ್ನ ದಂಡನ್ನು ಬಿಟ್ಟಿದ್ದನು, ಅಲ್ಲಿಯೇ ಒಂದು ಎತ್ತರವಾದ ಸ್ಥಳದಲ್ಲಿ ತನ್ನ ಡೇರೆಯನ್ನು ಹಾಕಿಸಿದ್ದನು. ಸರ್ ರಾಬರ್ಟ್ ಅಬರ್ ಕ್ರಾಂಬಿಯು ತನ್ನ ರಾಜ್ಯಕ್ಕಾಗಿ ದಂಡು ತೆಗೆಮಕೊಂಡು ಟಿಪ್ಪುಸುಲ್ತಾನನೊಡನೆ ಯುದ್ಧಕ್ಕೆ ಹೋಗುವ ಸಮಾಚಾರವನ್ನು ವೀರರಾಜನು ತಿಳಿದು ಅವನನ್ನು ಭೇಟಿಯಾಗುವುದಕ್ಕೆ ನಾಲ್ಕುನಾಡಿನಿಂದ ಬಂದನು. ಸರ್ ರಾಬರ್ಟ್ ಅಬರ್‌ಕ್ರಾಂಬಿಯ ಡೇರೆಯಲ್ಲಿಯೇ ಇಬ್ಬರಿಗೆ ಸಂದರ್ಶನವಾಯಿತು. ಅನಂತರ ಅಬರ್‌ಕ್ರಾಂಬಿಯು ಶ್ರೀರಂಗಪಟ್ಟಣದ ಕಡೆಗೆ ಹೋದನು. ವೀರರಾಜನು ಹಿಂದಿರುಗಿ ನಾಲ್ಕುನಾಡು ಅರಮನೆಗೆ ಬಂದನು. ಆದರೆ ವೀರರಾಜನಿಗೆ ಈ ಸಂದರ್ಶನವು ಸ್ಮಾರಕವಾಗಿ ಏನಾದರೂ ಮಾಡಬೇಕೆಂಬ ಅಭಿಲಾಷೆಯುಂಟಾಯಿತು. ಆಗಿನ ಕಾಲದಲ್ಲಿ ಯಾವುದಾದರೊಂದು ಸಂಗತಿ ಅಥವಾ ರಾಜನ ಹೆಸರನ್ನು ಶಾಶ್ವತಗೊಳಿಸುವುದಕ್ಕೆ ಪಟ್ಟಣವನ್ನು ಕಟ್ಟಿಸುವ ಸಂಪ್ರದಾಯವಿದ್ದಿತು. ವೀರರಾಜೇಂದ್ರನು ಹಾಗೆಯೇ ಯೋಚಿಸಿ ಸರ್ ರಾಬರ್ಟ್ ಅಬರ್ ಕ್ರಾಂಬಿಯನ್ನು ಕಂಡು ಮಾತನಾಡಿದ ಸ್ಥಳದಲ್ಲಿಯೇ ಒಂದು ಪಟ್ಟಣವನ್ನು ಕಟ್ಟಿಸುವುದಕ್ಕೆ 1792 ರಲ್ಲಿ ಪ್ರಾರಂಭಿಸಿದನು ಮತ್ತು ಈ ಪಟ್ಟಣಕ್ಕೆ ತನ್ನ ಹೆಸರನ್ನೇ ಕೊಟ್ಟು ವೀರರಾಜೇಂದ್ರಪೇಟೆಯಿಂದ ಕರೆದನು. ಆಗ ಅವನಿಗೆ ಈ ಪೇಟೆಯಲ್ಲಿ ವಾಸಿಸುವುದಕ್ಕೆ ಜನರು ಬೇಕಾಗಿದ್ದಿತು. ಈ ದೇಶದಲ್ಲಿ ಮೊದಲೇ ಇದ್ದ ಕೊಡಗರು ಮತ್ತು ಇತರ ಜನರು ಹಳ್ಳಿಗಳಲ್ಲಿದ್ದ ತಮ್ಮ ಭೂಮಿ ಮನೆಗಳನ್ನು ಬಿಟ್ಟು ಪಟ್ಟಣಗಳಲ್ಲಿ ವಾಸಿಸುವುದಕ್ಕೆ ಇಷ್ಟಪಡುತ್ತಿರಲಿಲ್ಲ. ಇದಲ್ಲದೆ ಟಿಪ್ಪುಸುಲ್ತಾನನು ಅನೇಕ ಸಾವಿರ ಕೊಡಗರನ್ನು ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಹೋದದ್ದರಿಂದಲೂ ಅನಂತರ ಟಿಪ್ಪುವಿನೊಡನೆ ಮಾಡಿದ ಯುದ್ಧಗಳಲ್ಲಿ ಅನೇಕ ಜನರು ಮಡಿದದ್ದರಿಂದಲೂ ಕೊಡಗಿನ ಜನಸಂಖ್ಯೆಯು ಬಹಳ ಕಡಿಮೆಯಾಗಿತ್ತು. ಆದುದರಿಂದ ವೀರರಾಜನೂ ನೆರೆಕರೆಯ ಹಳ್ಳಿಗಳಿಂದ ಜನರನ್ನು ಈ ಪೇಟೆಗೆ ತುಂಬಿಸುವುದಕ್ಕೆ ಇಷ್ಟಪಡಲಿಲ್ಲ ಆದರೆ ಅಷ್ಟರಲ್ಲಿ ಅವನಿಗೆ ಒಂದು ಒಳ್ಳೆಯ ಸಂದರ್ಭವು ಒದಗಿತು. ಟಿಪ್ಪುಸುಲ್ತಾನನು ಕೊಡಗಿನಿಂದ ಸಾವಿರಾರು ಕೊಡಗರನ್ನು ಶ್ರೀರಂಗಪಟ್ಟಣಕ್ಕೆ ಹಿಡಿದುಕೊಂಡು ಹೋಗಿದ್ದನು. ಇವರು ಶ್ರೀರಂಗಪಟ್ಟಣದಲ್ಲಿ ತೋರಿಕೆಗೆ ಮಹಮ್ಮದೀಯರ ಹಾಗೆ ಇದ್ದರೂ ಗುಟ್ಟಾಗಿ ತಮ್ಮ ಧರ್ಮವನ್ನೇ ಪರಿಪಾಲಿಸುತ್ತಿದ್ದರು. ಹೀಗಿರುವಾಗ ಕ್ರಿ. ಶ. 1790 ರಿಂದ 1792 ರ ವರೆಗೆ ಮೂರನೆ ಮೈಸೂರು ಯುದ್ಧವು ನಡೆಯಿತು. ಈ ಯುದ್ಧದ ಗಲಾಟೆಯ ಮಧ್ಯದಲ್ಲಿ ಶ್ರೀರಂಗಪಟ್ಟಣವಲ್ಲಿದ್ದ ಸಾವಿರಾರು ಕ್ರೈಸ್ತರೂ, ಸಾವಿರಾರು ಕೊಡಗರೂ ಅಲ್ಲಿಂದ ತಪ್ಪಿಸಿಕೊಂಡು ಹಿಂದಕ್ಕೆ ಬಂದರು. ಹೀಗೆ ಹಿಂದೆ ಬಂದ ಕ್ರೈಸ್ತರಲ್ಲಿ ಕೆಲವರು ಆಗುಂಬೆಘಾಟಿಗಾಗಿ ದಕ್ಷಿಣ ಕನ್ನಡಕ್ಕೆ ಹೋದರು. ಕೆಲವರು ಕೊಡಗಿಗಾಗಿ ದಕ್ಷಿಣ ಕನ್ನಡಕ್ಕೆ ಹೋಗುವುದಕ್ಕೆ ಬಂದರು. ಆ ಸಮಯದಲ್ಲಿ ವೀರರಾಜನು ಅವರನ್ನು ವೀರರಾಜೇಂದ್ರಪೇಟೆಯಲ್ಲಿ ತಡೆದು ಅವರು ಅಲ್ಲಿಯೇ ನೆಲೆಸುವಂತೆ ಪ್ರೋತ್ಸಾಹಿಸಿದನು. ಈ ಕೊಂಕಣಿ ಕ್ಯಾಥಲಿಕ್ ಕ್ರೈಸ್ತರು ಬಹಳ ಕಷ್ಟಗಾರರಾಗಿದ್ದರು. ಮತ್ತು ವ್ಯಾಪಾರದಲ್ಲಿಯೂ ಕೈಗಾರಿಕೆಯಲ್ಲಿಯೂ ಬಹಳ ಮುಂದುವರಿದವರಾಗಿದ್ದರು. ಆದುದರಿಂದ ವೀರರಾಜನು ಅವರನ್ನು ಅಲ್ಲಿಯೇ ತಡೆದು ಅವರ ಮತಧರ್ಮವನ್ನನುಸರಿಸುವುದಕ್ಕೆ ಅಡ್ಡಿಯಿಲ್ಲದೆ ಯುಂಟಾಗದಂತೆ ಅವರಿಗೋಸ್ಕರ ಪೋರ್ಚುಗೀಸರ ಪ್ರಾಂತ್ಯವಾದ ಗೋವೆಯಿಂದ ಜಾನ್ ಡಿಕೋಸ್ತ ಎಂಬ ಪಾದ್ರಿಯನ್ನು ಕರೆಸಿದನು. ಅವನು ಬಂದ ನಂತರ ಅವನ ಮುಖಾಂತರ ಇಲ್ಲಿ ನೆಲೆಸಿದ ಕೊಂಕಣಿ ಕ್ರೈಸ್ತರಿಗೆ ಒಂದು ಕೌಲು ಸಾಗುವಳಿ ನಿರೂಪವನ್ನು ಕೊಟ್ಟನು.

ಶ್ರೀರುದ್ರ.

ಹಾಲೇರಿ ವೀರರಾಜೇಂದ್ರನಡೆಯರು ಕ್ರೈಸ್ತಾನರ ಪಾದ್ರಿ ಜುವಾಂವುಕೋಸ್ತಗೆ ಅಪ್ಪಣೆಕೊಡಿಸಿದ ಕೌಲು ಸಾಗುವಳಿ ಪಟ್ಟಿ ಕ್ರಮವೆಂತೆಂದರೆ–ಆದಾಗಿ, ನಿನ್ನ ಮುಖಾಂತ್ರದಿಂದ ಈ ಶೀಮೆಯಲ್ಲಿ ವ್ಯವಸಾಯದ ಭೂಮಿ ಮಾಡುವ ಬಗ್ಯೂ,ವ್ಯಾಪಾರ ಸಾಪಾರವ ಬಗ್ಯೂ,ಪೇಟೆ ಬಸಾಯಿಸಿ ವ್ಯಾಪಾರ ಮಾಡುವ ಬಗ್ಯೆ ಸಹ ಎಷ್ಟು ಕ್ರೈಸ್ತರ ರೈತರು ಬರುತ್ತಾ ಇದ್ದಾರೆಯೋ ಆ ಬಂದಂತ ರೈತರಲ್ಲಿ ಭೂಮಿ ವ್ಯವಸಾಯ ಮಾಡಿಕೊಂಡು ಎಷ್ಟು ರೈತರು ಇರುತ್ತಾ ಇದ್ದೇವೆಯೆಂಬದಾಗಿ ಹೇಳುತ್ತಾ ಇದ್ದಾರೆಯೋ ಅವರಿಗೆ ಮನೆಮೂರು ಕಟ್ಟಿಸಿಕೊಳ್ಳುವ ಬಗ್ಯೆ ಜಾಗ, ಆರಂಭಕ್ಕೆ ಭೂಮಿ, ಬೀಜ, ಬಿತ್ತನೆ, ದವಸ ಧಾನ್ಯ ಮುಂತಾಗಿ ಕೊಡಿಸಿಯಿದ್ದೀತು. ಇದಲ್ಲದೆ ವ್ಯಾಪಾರ ಸಾಪಾರ ಮಾಡಿಕೊಂಡು ಇದ್ದೇವುಯೆಂಬಂತ ವ್ಯಾಪಾರದ ರೈತರನ್ನು ಈ ಯಿಡೇನಾಲ್ಕುನಾಡು ತಾಲೋಕು ಹೆಗ್ಗಳಕ್ಕೆ ಸಮೀಪವಾಗಿರುವಂತ ಬೆಟುವಳಿಯೆಂಬಲ್ಲಿ ಈಗ ಮೊಕರೂರು ಮಾಡಿಸಿದಂತ ವೀರರಾಜೇಂದ್ರಪೇಟೆಯಲ್ಲಿ ಇಟ್ಟು ಅವರಿಗೆ ಅಂಗಡಿಗಳನ್ನು ಕಟ್ಟಿಸಿಕೊಟ್ಟು ಅರಮನೆಯಿಂದಲೂ ಆಗತಕ್ಕ ಕುಮ್ಮಕ್ಕು ಮಾಡಿಸಿ ವ್ಯಾಪಾರಕ್ಕೆ ಮೊದಗಡ (ಮುಂಗಡ) ಬೇಕಾದವರಿಗೆ ಮೊದಗಡವನ್ನು ಕೊಡಿಸಿಕೊಟ್ಟು ಮೂರು ವರ್ಷ ಪರಿಯಂತ್ರಕ್ಕೂ ಆ ವ್ಯಾಪಾರದವರಿಂದ ಅರಮನೆಗೆ ಬರತಕ್ಕ ಸುಂಕ ಸೊಲಿಕೆ ಸದರಿ ಪ್ರಕಾರ ಆರಂಭದ ರೈತರಿಂದ ಬರತಕ್ಕ ಕಂದಾಯ ಕಾಣಿಕೆ ಮುಂತಾಗಿ ಸೂನ್ಯ ಕೊಡಿಸಿ, ಈ ಪೇಟೆಯಲ್ಲಿ ನಿನಗೆ ಒಂದು ಗುಡಿಯನ್ನು ಕಟ್ಟಿಸಿಕೊಟ್ಟು ಆ ಗುಡಿಯಲ್ಲಿ ನಡಿಯುವಂತೆ ವೊಂದು ದೀಪದ ಖರ್ಚನ್ನು ಅರಮನೆಯಿಂದ ಕೊಡಿಸಿಕೊಟ್ಟು ಇದ್ದೀತು. ಮೂರು ವರ್ಷದ ಮೇಲೆ ಈ ರಾಜ್ಯದಲ್ಲಿರ್ವ ಹತ್ತು ರೈತರು ಪರಾಕು ಮೇರೆಯಾನ ಪ್ರಕಾರ ಕಂದಾಯ ಕಾಣಿಕೆ ಸುಂಕ ಸೊಲಿಕೆ ಮುಂತಾಗಿ ಕೊಟ್ಟು ನಡಕೊಳ್ಳುತ್ತಾ ಇದ್ದಾರೋ ಆ ಮೇರೆ ಈ ರೈತರನ್ನು ನಡಿಸಿಕೊಳ್ಳಲಾದೀತುಯೆಂಬ ಈ ಅಪ್ಪಣೆಯನ್ನು ತಿಳಿದು ನಿನ್ನ ಮುಖಾಂತ್ರ ಬರುವಂತ ರೈತರನ್ನು ಕರತಂದು ಬಸ್ತಾಯಿಸುವುದಾಗಿಯೆಂಬ ಅಪ್ಪಣೆ ಪ್ರಕಾರ ಕ್ರಿಸ್ತ ಸಂದ 4894 ಪರಿಧಾವಿ ಸಂವತ್ಸರ ಆಶ್ವೀಜ ಬಹುಳ 10 ರಲ್ಲಿ ಕಾಸಾರಹಸ್ಯವ ಕ್ಷಾನುಬರಹ.'

(ರುಜು) ವೀರರಾಜೇಂದ್ರವಡೆಯರ್.

ಇದೇ ಮೇರೆ ವೀರರಾಜನು ನಿರೂಪ ಕೊಟ್ಟದ್ದಲ್ಲದೆ ಅದರಲ್ಲಿ ಹೇಳಿದಂತೆ ಒಂದು ಗುಡಿಯನ್ನು ಕಟ್ಟಿಸಿಕೊಟ್ಟನು. ಈ ಗುಡಿಯಲ್ಲಿರುವ ಪಾದ್ರಿಗೂ ಅವನ ಮನೆಯಲ್ಲಿದ್ದ ಆರು ಜನರಿಗೂ ಖರ್ಚಿಗೆ ದಿನ 1 ಕ್ಕೆ ಜನರ 1 ಕ್ಕೆ 1 ಸೇರು ಅಕ್ಕಿಯ ಮೇರೆ ತಿಂಗಳು ತಿಂಗಳು ಅರಮನೆಯಿಂದ ಅಕ್ಕಿಯನ್ನು ಧರ್ಮಾರ್ಥವಾಗಿ ಕೊಡುವ ಹಾಗೆ ವೀರರಾಜನು ಇನ್ನೊಂದು ನಿರೂಪವನ್ನು ಕೊಟ್ಟನು, ಕೊನೆಗೆ ಹೀಗೆ ತಿಂಗಳು ತಿಂಗಳು ಅಕ್ಕಿ ಕೊಡುವುದೆರ ಬದಲು ವರ್ಷಕ್ಕೆ 84 ಭಟ್ಟಿ ಭತ್ತ ಮತ್ತು ಗುಡಿಯ ಖರ್ಚಿಗೆ ಬೇಕಾದ ದೀಪದೆಣ್ಣೆ ಮತ್ತು ಮಯಣದ ಬತ್ತಿಗಳನ್ನು ಅರಮನೆಯಿಂದ ಕೊಡುವ ಹಾಗೆ ಮಾಡಿದನು. ಈ ಏರ್ಪಾಡು ಬ್ರಿಟಿಷರು ಕೊಡಗನ್ನು ಹಿಡಿಯುವ ವರೆಗೆ ನಡೆದು, ಬ್ರಿಟಿಷರು ಕೊಡಗನ್ನು ಹಿಡಿದ ಮೇಲೆ ಪಾದ್ರಿಗೆ ಭತ್ತ, ಎಣ್ಣೆ ಮುಂತಾದುವನ್ನು ಕೊಡುವುದರ ಬದಲು ತಿಂಗಳಿಗೆ ಪಾದ್ರಿಗೆ 20 ರೂಪಾಯಿ ವೇತನ ಕೊಡುವುದಕ್ಕೆ ಪ್ರಾರಂಭಿಸಿದರು. ಆ ವೇತನವು ಈಗಲೂ ನಡೆಯುತ್ತಿದೆ. ಇವಲ್ಲದೆ ವೀರರಾಜನು ಈ ಗುಡಿಗೆ ಒಂದು ಕಂಚಿನ ದೇವರ ದೀಪವನ್ನು ಒಂದು ಹಿತ್ತಾಳೆಯ ಪೆಟ್ಟಿಗೆಯನ್ನು, ಏಸುಕ್ರಿಸ್ತನ ಪ್ರತಿಮೆಗೆ ಹಾಕುವುದಕ್ಕೆ ಒಂದು ಚಿನ್ನದ ಕಿರೀಟವನ್ನು ಕೊಟ್ಟನು. ಈ ಚಿನ್ನದ ಕಿರೀಟವು ಈಗ ಕಾಣುವುದಿಲ್ಲ. ಬೇರೆ ಸಾಮಾನುಗಳು ಇವೆ. ಆನಂತರ ಲಿಂಗರಾಜನೂ ಈ ಗುಡಿಗೆ ಒಂದು ಕಂಚಿನ ದೀಪವನ್ನು ಕೊಟ್ಟನು.

ವೀರರಾಜನ ಕಾಲದಲ್ಲಿ ಕಟ್ಟಿದ ಗುಡಿಯು ಬಹಳ ಚಿಕ್ಕದಾಗಿತ್ತು. ಆದುದರಿಂದ ಈ ಗುಡಿಯನ್ನು ಬಿಟ್ಟಿ ಲಿಂಗರಾಜನ ಕಾಲದಲ್ಲಿ ದೊಡ್ಡದಾಗಿ ಕಟ್ಟಿದರು. ಈ ಗುಡಿಯ ಗೋಪುರವು ಬಹಳ ಉದ್ದವಾಗಿದ್ದು ಯೂರೋಪಿನ ಗ್ಥಾಥಿಕ್ ಶೈಲಿಯ ಕಟ್ಟಡವಾಗಿತ್ತು. ಈ ಗುಡಿಯನ್ನು ಕಟ್ಟುವುದಕ್ಕೂ ಲಿಂಗರಾಜನು ಬಹಳ ಸಹಾಯ ಮಾಡಿದನು. ಕೆಲವು ವರ್ಷಗಳಲ್ಲಿ ಈ ಗುಡಿಯೂ ಅಬಧ್ರವಾಗಿರಲು ಆ ದೇ ಸ್ಥಳದಲ್ಲಿ ಈಗಿರುವ ಗುಡಿಯನ್ನು ಗೋಪುರವನ್ನೂ ಕ್ರಿ. ಶ 1866 ರಲ್ಲಿ ಕಟ್ಟಿದರು. ಈ ಕಟ್ಟಡಕ್ಕೆ ಸರ್ಕಾರದವರು 4000 ರೂ. ಗಳನ್ನು ಕೊಟ್ಟರು. ಉಳಿದ ಹಣವನ್ನು ಇಲ್ಲಿನ ಕೊಂಕಣಿ ಕ್ರೈಸ್ತರೇ ಹಾಕಿದರು. ಈ ಚರ್ಚಿಗೂ ಅದರ ಸುತ್ತು ಮುತ್ತಲಿನ ಕಟ್ಟಡಗಳಿಗೂ ಸುಮಾರು 15000 ಖರ್ಚಾಯಿತು.

ವೀರರಾಜೇಂದ್ರಪೇಟೆಯಲ್ಲಿ ಕ್ರೈಸ್ತರು ನೆಲೆಸಿ ಕೆಲವು ವರ್ಷಗಳಲ್ಲಿ ಮಹಮ್ಮದೀಯರೂ ಬಂದರು. ಈ ಮಹಮ್ಮದೀಯರು ಮೊದಲು ಬಂಗಾಳದಲ್ಲಿದ್ದವರು ಎಂದು ಹೇಳುವರು. ಕ್ರಿ. ಶ. 1757 ರಲ್ಲಿ ಪ್ಲಾಸಿ ಕದನದಲ್ಲಿ ಸಿರಾಜುದ್ದೌಲನು ಸೋತು ಮೀರ್‌ಜಾಫರನು ನವ್ಯಬನಾಗಲು ಸಿರಾಜುದ್ದೌಲನ ಪಕ್ಷದ ಮುಸಲ್ಮಾನರು ಮೀರ್‌ಜಾಫರನ ಅಥವ ಇಂಗ್ಲೀಷರ ಆಳ್ವಿಕೆಯಲ್ಲಿರಲು ಇಷ್ಟಪಡಲಿಲ್ಲ. ಆದುದರಿಂದ ಅವರಲ್ಲಿ ಬಹಳ ಜನರು ಅಲ್ಲಿಂದ ಹೊರಟು ಸಮುದ್ರ ಮಾರ್ಗವಾಗಿ ದಕ್ಷಿಣಕ್ಕೆ ಬಂದರು. ಆವರಿಗೆ ಮೈಸೂರಿನಲ್ಲಿ ಹೈದರ್ ಆಲಿಯು ಪ್ರಬಲನಾಗುತ್ತಿರುವುದು ತಿಳಿಯಿತು. ಅವನ ರಾಜ್ಯದಲ್ಲಿ ನೆಲಸಬೇಕೆಂದು ಅವರು ಕೇರಳ ತೀರದ ಕೊಚ್ಚಿಯಲ್ಲಿ ಬಂದಿಳಿದರು. ಹೀಗೆ ಬಂದಿಳಿದವರಲ್ಲಿ ಕೆಲವರು ಅಲ್ಲಿಯೇ ನಿಂತರು. ಕೆಲವರು ಕಣ್ಣನೂರಿಗೆ ಬಂದು ಅಲ್ಲಿ ಮುಸಲ್ಮಾನ ರಾಜನಾದ ಅರಕಲ್ ರಾಜನ ಆಶ್ರಯದಲ್ಲಿ ನಿಂತರು. ಇವರು ಅಲ್ಲಿ ನೆಲೆಸಿದ ಬೀದಿಗೆ ಅಲ್ಲಿಯೂ ಬಂಗಾಳೀಬೀದಿಯೆಂದು ಈಗಲೂ ಹೆಸರಿದೆಯೆಂದು ಹೇಳುತ್ತಾರೆ. ಅರಕಲ್ ರಾಜನಿಗೂ ವೀರರಾಜನಿಗೂ ಸ್ನೇಹವಿತ್ತು. ಹಾಗಾಗಿ ಕೆಲವು ನೂರು ಮುಂದಿ ಮಹಮ್ಮದೀಯರು ವೀರರಾಜೇಂದ್ರಪೇಟೆಗೆ ಪಾಸಕ್ಕೆ ಬಂದರು. ಇವರೆಲ್ಲರೂ ವ್ಯಾಪಾರಸ್ಥರಾಗಿದ್ದರು. ಇವರಿಗೆ ರಾಜನು ಭೂಮಿಯನ್ನು ತೆಗೆದುಕೊಳ್ಳು

ಪದಕ್ಕೆ ಹೇಳಲು ಇವರು ತಾವು ವ್ಯವಸಾಯ ಮಾಡುವುದಲ್ಲವೆಂದು ಭೂಮಿಯನ್ನು ಬಿಟ್ಟು ಬಿಟ್ಟದ್ದೆಂದು ಹೇಳುತ್ತಾರೆ. ಇವರು ಕೊಡಗಿಗೆ ಬಂದಾಗ ಈಗಿರುವ ಬಂಗಾಳೀಬೀದಿ ಮತ್ತು ದೊಡ್ಡ ಬೀದಿ ಎಲ್ಲಾ ಕಾಡಾಗಿತ್ತು. ಆ ಕಾಡುಗಳನ್ನು ಕಡಿದು ಇವರು ತಮ್ಮ ಮನೆಗಳನ್ನೂ ಅಂಗಡಿ ಬೀದಿಗಳನ್ನು ಕಟ್ಟಿಕೊಂಡರು. ಇವರು ಮನೆಗಳನ್ನು ಕಟ್ಟಿಕೊಂಡ ಸ್ಥಳಕ್ಕೆ ಬಂಗಾಳಬೀದಿಯೆಂದು ಹೆಸರಾಯಿತು.

ಇದೇ ಸಮಯದಲ್ಲಿಯೇ ತೆಲುಗು ಶೆಟ್ಟಿಗಳು ವೀರರಾಜಪೇಟೆಗೆ ಬಂದರೆಂದು ಹೇಳುವರು. ಇವರು ಒಂದು ಕಾಲದಲ್ಲಿ ಕೊಯಮುತ್ತೂರಿನವರಾಗಿದ್ದು ಅನಂತರ ಮೈಸೂರು ಸೀಮೆಯಲ್ಲಿ ನೆಲೆಸಿದ್ದರು. ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಇವರು ಕೊಡಗಿಗೆ ಬಂದು ವೀರರಾಜಪೇಟೆಯಲ್ಲಿ ನೆಲೆಸಿದರು. ಕೆಲವರು ಹೊಸೂರಿನಲ್ಲಿಯೂ, ಚೆನ್ನಯ್ಯನ ಕೋಟೆಯಲ್ಲಿಯೂ ನಿಂತರೆಂದು ಹೇಳಿಕೆಯಿದೆ. ವೀರರಾಜಪೇಟೆಗೆ ಬಂದವರು ತಾವು ಈಗಿರುವಲ್ಲಿ ಕಾಡನ್ನು ಕಡಿದು ಮನೆಗಳನ್ನು ಕಟ್ಟಿಕೊಂಡರು. ಆ ಬೀದಿಗೆ ಆಗ ತೆಲುಗರ ಬೀದಿಯೆಂದು ಹೆಸರಾದುದು ಇಂದಿಗೂ ನಿಂತಿದೆ.

ಇವರ ನಂತರ ರಾಜನ ಜಾತಿಯವರೇ ಆದ ಶಿವಭಕ್ತರು ಬಹಳ ಜನರು ಮೈಸೂರು ಸೀಮೆಯಿಂದ ಇಲ್ಲಿಗೆ ಬಂದರು. ಇವರೆಲ್ಲರೂ ವ್ಯಾಪಾರಿಗಳೇ ಆಗಿದ್ದರು. ಇವರ ಮನೆಗಳು ಈಗಿನ ಜೈನರ ಬೀದಿಯಲ್ಲೆಲ್ಲಾ ತುಂಬಿದ್ದಲ್ಲದೆ ಗೋಣಿಕೊಪ್ಪಲಿಗೆ ಮಾರ್ಗ ತಿರುಗುವ ಚೌಕದಿಂದ ಅರ್ಧಫರ್ಲಾಂಗು ವರೆಗೆ ಇದ್ದವು. ಇಗಲೇ ದೊಡ್ಡ ವೀರರಾಜನು ವೀರರಾಜಪೇಟೆಯಲ್ಲಿ ಒಂದು ಜಂಗಮ ಮಠವನ್ನು ಕಟ್ಟಿಸಿ ಅದಕ್ಕೆ ಜಹಗೀರನ್ನು ಕೊಟ್ಟನು ಮತ್ತು ಲಿಂಗಾಯತರು ಕಟ್ಟಿಸಿದ ಬಸವೇಶ್ವರನ ಗುಡಿಗೆ ಜೋಡಿ ಭೂಮಿಯನ್ನು ಕೊಡಿಸಿದನು.

ಲಿಂಗಾಯತರಲ್ಲಿ ಲಿಂಗರಾಜನ ಕಾಲದಲ್ಲಿ ಅಡ್ಡಬುಡ್ಡಿ ಸುಬ್ಬಯ್ಯನೆಂಬವನು ಪ್ರಸಿದ್ಧನಾದ ವರ್ತಕನಾಗಿದ್ದನು, ಲಿಂಗರಾಜನು ಇವನ ಮೂಲಕವೇ ಅರಮನೆಗೆ ಬೇಕಾದ ಅನೇಕ ಸಾಮಾನುಗಳನ್ನು ತರಿಸುತ್ತಿದ್ದನು. ಚಿಕ್ಕಪೇಟೆಯೂ ಆಗ ದೊಡ್ಡ ಕಾಫಿ ವ್ಯಾಪಾರ ಸ್ಥಳವಾಗಿತ್ತು.

ಇವರೆಲ್ಲರ ನಂತರ ಬ್ರಿಟಿಷರ ಕಾಲದಲ್ಲಿ ಜೈನರೂ ದೇವಾಂಗದವರೂ ಮತ್ತು ಇತರರೂ ವೀರರಾಜಪೇಟೆಗೆ ಬಂದರು.

ವೀರರಾಜಪೇಟೆಯಲ್ಲಿ ದೊಡ್ಡ ವೀರರಾಜನು ಒಂದು ಅರಮನೆಯನ್ನು ಕಟ್ಟಿಸಿದನು. ಅದನ್ನು ಬಿಚ್ಚಿಸಿ ಸ್ವಲ್ಪ ಮಟ್ಟಗೆ ಅದರ ಸಾಮಾನುಗಳಿಂದಲೇ ಬ್ರಿಟಿಷರು ಅದರ ದಳದ ಮುಂಭಾಗದಲ್ಲಿ ಟ್ರಾವ್ಸ್ಲರ್ಸ್ ಬಂಗ್ಲೆಯನ್ನು ಕಟ್ಟಿಸಿದರು. ಅರಮನೆಯ ಸುತ್ತಲಿದ್ದ ಕೋಟೆ ಗೋಡೆಗಳ ಅವಶೇಷವೂ, ಹೆಬ್ಬಾಗಿಲೂ ಈಗಲೂ ಕಾಣಬರುತ್ತವೆ. ಆದರೆ ಈ ಕೋಟೆಯ ಗೋಡೆಗಳು ಮಡಿಕೇರಿ ಅರಮನೆ ಕೋಟೆ ಗೋಡೆಯಷ್ಟು ದಪ್ಪವೂ ಎತ್ತರವೂ ಆಗಿರಲಿಲ್ಲ.

ಈ ಅರಮನೆ ಗುಡ್ಡದ ಎಡಭಾಗದ ತಗ್ಗಿನಲ್ಲಿ ಎಂದರೆ ಈಗ ಮೂರ್ನಾಡು ಮಡಿಕೇರಿ ರಸ್ತೆಯ ಬಲಭಾಗದಲ್ಲಿ ಅರಮನೆಯಲ್ಲಿನ ಸರಿಕೆಳಗೆ ರಾಜನು ಒಂದು ಕೊಳವನ್ನೂ ಒಂದು ಬಾವಿಯನ್ನೂ ತೋಡಿಸಿದನು. ಇವುಗಳ ನೀರು ಬಹಳ ಚೆನ್ನಾಗಿತ್ತು. ಆದರೆ ಈಗ ಹರಿಜನರು ಕೆಲಸವಿಲ್ಲದೆ ಬೇರೆ ಯಾರೂ ಈ ಬಾವಿ ಕೊಳಗಳನ್ನು ಉಪಯೋಗಿಸದೆ ಇರುವುದರಿಂದ ಅವು ಹಾಳುಬಿದ್ದಿವೆ. ಇದೇ ಸಮಯದಲ್ಲಿಯೇ ವೀರರಾಜನು ಈಗ ಪೂರ್ಕೆಟ್ಟು ಹತ್ತಿರದಲ್ಲಿರುವ ಗೌರಿ ಕೆರೆಯನ್ನು ತೋಡಿಸಿದನು. ಈ ಕೆರೆಯು ಕೆಲವು ವರ್ಷಗಳ ನಂತರ ಕಟ್ಟಿ ಜರಿಯ ಹಾಳಾಗುತ್ತಿರಲು ಪಾಲ್ಪರೆ ರುದ್ರಯ್ಯಶೆಟ್ಟಿಯು ಇದನ್ನು ಸುಮಾರು 1860 ರಲ್ಲಿ ಸರಿಯಾಗಿ ಕಟ್ಟಿಸಿದನು.

ಇಲ್ಲಿ ರಾಜರ ಕಾಲದಲ್ಲಿ ಒಂದು ಸುಭೆದಾರ ಕಚ್ಚೇರಿಯೂ, ಒಂದು ಪೇಟೆ ಪಾರುಪತ್ಯಗಾರರ ಕಚ್ಚೇರಿಯೂ ಇದ್ದವು. ಬ್ರಿಟಿಷರ ಆಳ್ವಿಕೆಯು ಪ್ರಾರಂಭವಾದ ನಂತರ ವೀರರಾಜಪೇಟೆಯಲ್ಲಿ ಒಬ್ಬ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಮತ್ತು ಒಬ್ಬ ಪೇಟೆ ಸುಭೆದಾರ ಎಂಬ ಈ ಎರಡು ಮುಖ್ಯ ಅಧಿಕಾರಿಗಳಿದ್ದರು. ಅಸಿಸ್ಟೆಂಟ್ ಸುಪರಿಂಟೆಂಡೆಂಟರ ಕಚ್ಚೇರಿಯು ಹಳೆ ಗಡಂಗದ ಬೀದಿಯಿಂದ ಚೆಂಬೆಬೆಳ್ಳಿಯೂರು ಗ್ರಾಮಕ್ಕೆ ಹೋಗುವ ಬೀದಿಯ ಎಡಭಾಗದಲ್ಲಿ ಇತ್ತೆಂದು ಹಳಬರು ಹೇಳುವರು: ಈಗಿನ ತಾಲೋಕು ಕಚ್ಚೇರಿಯು 1871 ರಲ್ಲಿ ಕಟ್ಟಿ ಪೂರೈಸಲು ಆಗ ಅಸಿಸ್ಟೆಂಟ್ ಸುಪರಿಂಟೆಂಡೆಂಟರ ಕಚ್ಚೇರಿಯೂ, ಪೇಟೆ ಸುಭೆದಾರರ ಕಚ್ಚೇರಿಯೂ ಅಲ್ಲಿಗೆ ವರ್ಗಾಯಿಸಲ್ಪಟ್ಟವು. ಅಷ್ಟರ ವರೆಗೆ ಪೇಟೆ ಸುಭೆದಾರರ ಕಚ್ಚೇರಿಯು ಈಗ ಬಸವನ ಗುಡಿ ಹತ್ತಿರದಲ್ಲಿರುವ ಪಿ. ಡಬ್ಲ್ಯೂ. ಡಿ. ಇಲಾಖೆಯ ಸೆಕ್ಷನ್ ಆಫೀಸರ ವಾಸದ ಮನೆಯೇ ಆಗಿತ್ತು. ಆ ಕಾಲದಲ್ಲಿ ತೆಲುಗರ ಬೀದಿಯ ತುದಿಯಿಂದ ಬಸವನ ಗುಡಿಯ ಕೆಳಗಿನ ಚೌಕದ ವರೆಗೆ ಮುಖ್ಯ ವ್ಯಾಪಾರ ಸ್ಥಳವಾಗಿತ್ತು. ವಾರಕ್ಕೊಂದಾವೃತ್ತಿ ಸಂತೆಯು ಬಸವನ ಗುಡಿಯ ಮುಂದಿನ ಅಂಗಳದಲ್ಲಿ ನಡೆಯುತ್ತಿತ್ತು. ಈ ಸಂತೆಯ ಬಹಳ ಮೊದಲು ಶುಕ್ರವಾರ ನಡೆಯುತ್ತಿತ್ತು. ಅನಂತರ ಬುಧವಾರ ಜರುಗಲು ಪ್ರಾರಂಭವಾಯಿತು. ಈ ಸಂತೆಯು ಈಗಿನ ಪೂರ್ಕೆಟ್ಟು ಕಟ್ಟುವ ವರೆಗೆ ಎಂದರೆ ಸುಮಾರು 1875–80 ರ ವರೆಗೆ ಅಲ್ಲಿ ನಡೆಯುತ್ತಿತ್ತು. ಈಗಿನ ಪೂರ್ಕೆಟ್ಟು ಕಟ್ಟಿದ ಮೇಲೆ ಅಂಗಡಿಗಳು ಮೆಲ್ಲಮೆಲ್ಲನೆ ಪೂರ್ಕೆಟ್ಟು ಕಡೆ ಪ್ರಬಲವಾಗಿ ಕ್ರಯವಿಕ್ರಯ ಈ ಭಾಗದಲ್ಲಿ ವ್ಯಾಪಾರವು ನಿಂತೇಹೋಯಿತು. ಪೇಟೆ ಸುಭೆದಾರರ ಕಚ್ಚೇರಿಯು ಬಸವನ ಗುಡಿಯ ಹತ್ತಿರದಿಂದ ತಾಲೋಕು ಕಚ್ಚೇರಿಗೆ ವರ್ಗಾಯಿಸಲ್ಪಟ್ಟಾಗ ಆ ಕಟ್ಟಡವು ಪೊಲೀಸ್ ಸ್ಟೇಷನ್ ಆಯಿತು. ಈಗ ಪೊಲೀಸ್ ಸ್ಟೇಷನ್ ಆಗಿರುವ ಕಟ್ಟಡವು ಮೊದಲು ಆಸ್ಪತ್ರೆಯಾಗಿತ್ತು. ಈ ಕಟ್ಟಡವನ್ನು ಜೈನರ ರಾಯಣ್ಣ ಶೆಟ್ಟಿಯು ಕಟ್ಟಿಸಿದನೆಂದು ಹೇಳುತ್ತಾರೆ.

1853 ರಲ್ಲಿ ವೀರರಾಜೇಂದ್ರಪೇಟೆಯಿಂದ ಮಲಬಾರಿಗೆ ಹೋಗುವ ರಸ್ತೆಯು ಮಾಡಲ್ಪಟ್ಟಿತು. ಆ ಸಮಯದಲ್ಲಿ ರೂ ಸಾಯಿಗೆ 40,45 ಸೇರು ಅಕ್ಕಿ ಮಾರಾಟವಾಗುತ್ತಿತ್ತಂತೆ. ಈ ರಸ್ತೆಯು ಮಾಡಲ್ಪಟ್ಟ ನಂತರ 1864 ರಲ್ಲಿ ವೀರರಾಜಪೇಟೆಯಲ್ಲಿ ಪೋಸ್ಟಾಫೀಸನ್ನು ತೆರೆದರು.

ವೀರರಾಜಪೇಟೆಯಲ್ಲಿ ಮುನ್ಸಿಪಾಲಿಟಿಯು 1870 ರಲ್ಲಿ ಸ್ಥಾಪಿಸಲ್ಪಟ್ಟಿತು. ಆದರೆ ಆಗ ಉದ್ಯೋಗಸ್ತರಲ್ಲದ ಸದಸ್ಯರನ್ನು ಸರ್ಕಾರದವರೇ ನೇಮಕ ಮಾಡುತ್ತಿದ್ದರು. ಅಧ್ಯಕ್ಷನು ಸರ್ಕಾರಿ ಉದ್ಯೋಗಸ್ತನೇ ಆಗುತ್ತಿದ್ದನು.

ವೀರರಾಜಪೇಟೆಯಲ್ಲಿ 1834 ರಲ್ಲಿ ಒಂದು ಇಂಗ್ಲಿಷ್ ಕನ್ನಡ ಶಾಲೆಯನ್ನು ತೆರೆದರು. 1842 ರಲ್ಲಿ ಇಲ್ಲಿ ರೋಮನ್ ಕ್ಯಾಥಲಿಕ್ ಕ್ರೈಸ್ತಿಯನರು ಒಂದು ಶಾಲೆಯನ್ನು ತೆರೆಯಲು ಈ ಸರ್ಕಾರಿ ಶಾಲೆಯು ಮುಚ್ಚಲ್ಪಟ್ಟಿತು. ಆದರೆ ತಿರುಗಿ 1854 ರಲ್ಲಿ ಇಂಡಿಯಾಸರ್ಕಾರದ ಸೂಚನೆ ಮೇರೆ ಇಲ್ಲಿ ಒಂದು ಕನ್ನಡ ಶಾಲೆಯನ್ನು ತೆರೆದರು. ಆಗ ಇತರ ಹಳೇ ತಾಲೋಕಿನ ಮುಖ್ಯ ಸ್ಥಳಗಳಲ್ಲಿಯೂ ಕನ್ನಡ ಶಾಲೆಗಳನ್ನು ತೆರೆದರು. 1870 ರಲ್ಲಿ ವೀರರಾಜಪೇಟೆಯ ಕನ್ನಡ ಶಾಲೆಯಲ್ಲಿ ಇಂಗ್ಲಿಷನ್ನೂ ಕಲಿಸುವ ಏರ್ಪಾಡು ಮಾಡಿದರು.

ಇಲ್ಲಿ ಮುನ್ಸಿಫ್ ಕೋರ್ಟನ್ನು 1872 ರಲ್ಲಿ ತೆರೆದರೆಂದು ಹೇಳುತ್ತಾರೆ.'' ಈ ಕೋರ್ಟು ಮೊದಲು ದೊಡ್ಡ ಬೀದಿಯಲ್ಲಿದ್ದು ನಂತರ ಈಗಿನ ಕಟ್ಟಡಕ್ಕೆ ಹೋಯಿತು.

ಈ ಪಟ್ಟಣವು ಜನಭರಿತವಾದ ಗ್ರಾಮಗಳ ಮಧ್ಯದಲ್ಲಿದ್ದು ದಿನ ದಿನಕ್ಕೆ ಅಭಿವೃದ್ಧಿಯನ್ನು ಹೊಂದುವ ಸೂಚನೆಯು ಕಂಡು ಬರುತ್ತದೆ. ಇಲ್ಲಿ ವ್ಯಾಪಾರವೂ ತಕ್ಕ ಮಟ್ಟಿಗೆ ಚೆನ್ನಾಗಿ ನಡೆಯುತ್ತಿದೆ.

ಈ ಲೇಖನದಲ್ಲಿ ಬರೆದಿರುವ ವಿಷಯಗಳನ್ನು ವೀರರಾಜಪೇಟೆಯ ರೋಮನ್ ಕ್ಯಾಥಲಿಕ್ ಚರ್ಚಿನ ಪತ್ರಗಳಿಂದಲೂ, ರೈಸ್‌ರಿಕ್ಟರರ ಚರಿತ್ರೆಗಳಿಂದಲೂ ಬೇರೆ ಬೇರೆ ಕೋಮುಗಳ ಹಳಬರಿಂದಲೂ ಸಂಗ್ರಹಿಸಿ ಬರೆದಿರುವೆನು.

ಕೈದಿಗಳ ಬಿಡುಗಡೆಯಿಂದ ಸ್ವಾತಂತ್ರ್ಯ ಸಂಗ್ರಾಮು ನಿಲ್ಲದು.

ಟ್ರಾವಂಕೋರ್ ಸಂಸ್ಥಾನ ಕಾಂಗ್ರೆಸ್ ಶಿಷ್ಟ ಮಂಡಳದವರು ಗಾಂಧಿಜಿ, ಸರದಾರ ಪಟೇಲರನ್ನು ಮತ್ತು ಪಂಡಿತ ನೆಹರುಗಳನ್ನು ಭೆಟ್ಟಿಯಾದರು. ಶಿಷ್ಟಮಂಡಳದ ಧುರೀಣರಾದ ಪಟ್ಟಂಥಾನು ಪಿಳ್ಳೆಯವರು ಪತ್ರಿಕೆಗಳಿಗೆ ಈ ರೀತಿ ಪ್ರಕಟನೆ ಕೊಟ್ಟಿರುವರು. ಸರಕಾರದವರು ರಾಜಕೀಯ ಕೈದಿಗಳ ಬಿಡುಗಡೆ ಮಾಡಿದ ಕೂಡಲೇ ಸ್ವಾತಂತ್ರ್ಯ ಸಂಗ್ರಾಮ ಮುಗಿಯಿತೆಂದು ಜನರು ತಿಳಿಯಕೂಡದು. ಕಾಂಗ್ರೆಸ್ ಜಳಪಳಿಗೆ ಇದೀಗ ಹೆಚ್ಚು ಬೆಂಬಲವು ದೊರೆಯಹತ್ತಿದ್ದು ಹೊಣೆಗಾರ ರಾಜ್ಯಪದ್ಧತಿ ಸಿಕ್ಕುವ ವರೆಗೆ ಸಂಗ್ರಾಮವು ನಿಲ್ಲಲಾರದು. ಟ್ರಾವಂಕೋರು ಸಂಸ್ಥಾನವು ಇಡೀ ಭಾರತದಲ್ಲಿ ಒಳ್ಳೇ ಪ್ರಗತಿ ಪಡೆದಿರುವುದರಿಂದ ಹೊಣೆಗಾರ ರಾಜ್ಯಪದ್ಧತಿ ಸಿಕ್ಕುವ ವರೆಗೆ ಸಂಗ್ರಾಮವು ನಿಲ್ಲಲಾರದು. ಟ್ರಾವಂಕೋರ ಸಂಗ್ರಾಮವು ಹಿಂದೀ ಸಂಸ್ಥಾನ ಪ್ರಜಾಜವಾಬ್ದಾರಿ ಸರ್ಕಾರ ಪಡೆಯಲು ಹೂಡಿದ ಸಂಗ್ರಾಮದ ಒಂದು ಅಂಗ ಮಾತ್ರ. ಹಿಂದೀ ಸಂಸ್ಥಾನ ಪ್ರಜರೆಲ್ಲ ಒಂದೆಡೆ ಸೇರಿ ಹೊಣೆಗಾರಿ ರಾಜ್ಯಪದ್ಧತಿಯನ್ನು ಪ್ರಸ್ತಾಪಿಸಿಕೊಳ್ಳಲು ಸಂಘಟಿತ ಹೋರಾಟ ನಡಿಸಬೇಕೆಂದು ನಾನು ಸೂಚಿಸುತ್ತೇನೆ. ನಾನು ಗಾಂಧಿ ಸರದಾರರೊಡನೆ ವಿಚಾರ ವಿನಿಮಯ ಮಾಡಿ ಬಂದಿದ್ದೇನೆ. ಬೇಗನೆ ಟ್ರಾವಂಕೋರ ಸಂಸ್ಥಾನ ಪ್ರಜಾ ಪರಿಷತ್ತನ್ನು ಕರೆದು ಮುಂದಿನ ನೂರ್ಗವನ್ನು ಗೊತ್ತುಪಡಿಸಲಿರುವೆವು.

ಟ್ರಾವಂಕೋರ ಸಂಸ್ಥಾನ ಕಾಂಗ್ರೆಸ್ಸಿನ ಸದಸ್ಯರಾದ ಜಿ. ರಾಮಚಂದ್ರನ್ ಇವರೂ ಗಾಂಧಿಜಿ ಸರ್ದಾರರನ್ನು ಭೆಟ್ಟಿಯಾದರು. ವರ್ಧಾದಲ್ಲಿ ಕೂಡಲಿರುವ ಶಿಷ್ಟಣ ಪರಿಷತ್ತಿನಲ್ಲಿ ಭಾಗವಹಿಸಿ ಅವರು ನಂತರ ದಿಲ್ಲಿಗೆ ಹೋಗುವರು.

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.

ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು–ವಲ್ಕೈನೈಟ್, ಎಂದೂ ತುಂಡಾಗದ ಪೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

2

ಕೊ ಡ ಗು

ನವಂಬರ್ ತಾರೀಕು ೨೫ನೇ ಶುಕ್ರವಾರ ೧೯೩೫.

ವ್ಯ ವ ಸಾ ಯ ಗಾ ರ ರ ಸಾ ಲ ದ ಹೊ ರೆ.

ದೇಶದ ಆರ್ಥಿಕ ಸ್ಥಿತಿಯು ದಿನೇ ದಿನೇ ಕೆಡುತ್ತಾ ಬರುತ್ತಿರುವುದು ಶೋಚನೀಯವಾಗಿದೆ. ಇದಕ್ಕೆ ಮುಖ್ಯ ಕಾರಣವು ವ್ಯವಸಾಯಗಾರರ ಸ್ಥಿತಿಯು ಅಭಿವೃದ್ಧಿಗೊಳ್ಳುವುದರ ಬದಲು ಹೀನವಾಗುತ್ತಾ ಬರುತ್ತಿರುವುದೇ ಆಗಿದೆ. ದೇಶದ ಐಶ್ವರ್ಯವನ್ನೂ, ಅನ್ನವನ್ನೂ ಉಂಟುಮಾಡುವವರು ಹಳ್ಳಿಗಾಡಿನ ರೈತರು. ಅವರು ಸಾಕಷ್ಟು ದವಸ ಧಾನ್ಯಗಳನ್ನು ಬೆಳೆದರೆ ಮಾತ್ರ ದೇಶದ ಜನಸಮುದಾಯಕ್ಕೆ ಹೊಟ್ಟೆಗೆ ಅನ್ನ ದೊರೆಯುವುದು; ಅವರ ಜೇಬಿನಲ್ಲಿ ಹಣವಿದ್ದರೇನೇ ವ್ಯಾಪಾರಸ್ಥರು ಮತ್ತು ಇತರ ಕಸಬುದಾರರ ಕೈಯ್ಯಲ್ಲಿ ದುಡ್ಡು ಓಡ್ಯಾಡುವುದು. ಆದುದರಿಂದ ರೈತರ ಉದ್ಧಾರಕ್ಕೆ ಎಲ್ಲರೂ ಗಮನ ಕೊಡಬೇಕಾದದ್ದು ಅತ್ಯವಶ್ಯ.

ಇಂದು ರೈತರ ಬಡ ಸ್ಥಿತಿಯನ್ನು ವರ್ಣಿಸಲಸಾಧ್ಯವಾಗಿದೆ. ಕೊಡಗಿನಲ್ಲಿ ಕೆಲವು ವರ್ಷಗಳಿಂದ ಮಳೆಗಾಲವು ಸಕಾಲದಲ್ಲಿಯೂ, ಸಪರಿಮಾಣದಲ್ಲಿಯೂ ನಡೆಯದೆ ಧಾನ್ಯಗಳ ಬೆಳೆಯು ಕೆಟ್ಟು ಹೋಗಿ ರೈತರ ಉತ್ಪತ್ತಿಯು ಕಡಿಮೆಯಾಗುತ್ತಾ ಬಂದಿದೆ. ಇದರೊಂದಿಗೆ ಇತ್ತೀಚೆಗೆ ದವಸ ಧಾನ್ಯಗಳ ಬೆಲೆಯೂ ಬಹು ಮಟ್ಟಿಗೆ ಇಳಿದು ಹೋಗಿ ಅವರ ಆದಾಯವು ಕುಂಯಿತ್ತಾ ಬಂದಿದೆ. ಆದರೆ ಈಗಿನ ನವನಾಗರೀಕತೆಯ ಹರಡುವಿಕೆಯಿಂದ ದುಂದುಗಾರಿಕೆಯ ಜೀವನದ ರುಚಿಯು ವ್ಯವಸಾಯಗಾರರಲ್ಲಿಯೂ ಹುಟ್ಟಿ, ಅವರ ಜೀವನದ ಆವಶ್ಯಕತೆಗಳು ದಿನೇ ದಿನೇ ಹೆಚ್ಚುತ್ತಾ ಬರುತ್ತಿವೆ. ಇವೆಲ್ಲಾ ಕಾರಣಗಳಿಂದ ರೈತರು ಈ ಮೊದಲು ತೆಗೆದುಕೊಂಡ ಸಾಲಗಳನ್ನು ಮರುಪಾವತಿ ಮಾಡಲಾರದೆ ಹೋದದಲ್ಲದೆ ಹೊಸ ಸಾಲವನ್ನೂ ಎತ್ತಬೇಕಾಯಿತು. ಈಗ ಸಾಲದ ಹೊರೆಯಿಂದ ಬಗ್ಗಿ ಹೋಗಿ, ಯಾವ ಕೆಲಸ ಮಾಡಲೂ ಉತ್ಸಾಹಹೀನರಾಗಿರುವರು. ಅವರಿಗೆ ಈಗ ತಮ್ಮ ಜೀವನವೇ ಒಂದು ದೊಡ್ಡ ಹೊರೆಯಾಗಿ ಪರಿಣಮಿಸಿದೆ. ಈ ಸ್ಥಿತಿಯನ್ನು ಮುಂದುವರಿಯಲು ಬಿಟ್ಟರೆ ದೇಶದ ಏಳಿಗೆಗೂ, ಸರ್ಕಾರದ ಆಡಿಪಾಯಕ್ಕೂ ಅಪಾಯ ಉಂಟಾಗುವದೆಂಬುದರಲ್ಲಿ ಸಂದೇಹವಿಲ್ಲ.

ವ್ಯವಸಾಯಗಾರರ ಇಂಥಾ ಶೋಚನೀಯಪರಿಸ್ಥಿತಿಯನ್ನು ನಿವಾರಿಸಲು ಹಲವು ದೇಶಗಳ ಸರ್ಕಾರದವರು ಒಂದಲ್ಲ ಒಂದು ವಿಧಾನವನ್ನು ಕೈಕೊಂಡಿರುವರು. ರೈತರ ಆದಾಯವು ಹೆಚ್ಚಾಗಿ, ಖರ್ಚು ಕಡಿಮೆಯಾದರೆ ಅವರ ಸಾಲ ಮರುಪಾವತಿ ಮಾಡುವ ಶಕ್ತಿಯು ಹೆಚ್ಚುವುದು. ಇದನ್ನು ಸಾಧಿಸಲು ಸರ್ಕಾರದವರು ತಕ್ಕ ಏರ್ಪಾಡುಗಳನ್ನು ಆಗುವಷ್ಟು ಬೇಗನೆ ಮಾಡಬೇಕು. ಇದರೊಂದಿಗೆ ಈಗಿನ ಸಾಲದ ಭಾರವನ್ನು ತಗ್ಗಿಸುವ ಕ್ರಮಗಳನ್ನು ಜಾರಿಗೆ ತರಬೇಕು. ಇದಕ್ಕಾಗಿ ಇತರ ಕಡೆಗಳಲ್ಲಿ ಮಾಡಿರುವಂತೆ ಸಾಲನಿವಾರಣೆ ಬೋರ್ಡನ್ನು ಅಧಿಕಾರಯುಕ್ತವಾಗಿ ಸ್ಥಾಪಿಸಬೇಕು. ಇದನ್ನು ಸಾಧಿಸಲು ನ್ಯಾಯವಿಧಾಯಕ ಸಭೆಯಲ್ಲಿ ಮಸೂದೆಯೊಂದನ್ನು ತರುವುದಾಗಿ ಸರ್ಕಾರದವರು ಮೊತುಕೊಟ್ಟು ದೀರ್ಘಕಾಲವಾದರೂ ಇನ್ನೂ ಸುಮ್ಮನಿರುವುದು ವ್ಯಸನಕರ. ಇಂಥಾ ಬೋರ್ಡಿನ ಅಪಾರವಾದ ಪ್ರಯೋಜನವನ್ನು ಸಹಕಾರಿ ಸೆಂಟ್ರಲ್ ಬ್ಯಾಂಕಿನವರು ಕಾರ್ಯತಃ ಮಾಡಿತೋರಿಸಿರುವರು. ಅವರ ಬೋರ್ಡಿಗೆ ಅಧಿಕಾರವಿಲ್ಲದಿದ್ದರೂ ಕೂಡ ಕೆಲವು ಗ್ರಾಮಸ್ಥರ ಸಾಲದ ಹೊರೆಯನ್ನು ಬಹು ಮಟ್ಟಿಗೆ ಇಳಿಸಿರುವರು. ಈ ವಿಚಾರದಲ್ಲಿ ಸರ್ಕಾರಿ ಅಧಿಕಾರಿಗಳು ಉದಾಸೀನ ಮಾಡುತ್ತಿರುವುದು ಎಂದೂ ನ್ಯಾಯವಲ್ಲ. ತಡ ನೂಡದೆ ಇಂಥಾ ಬೋರ್ಡೊಂದನ್ನು ಸ್ಥಾಪಿಸುವುದು ಅನಿವಾರ್ಯವಾಗಿದೆ.

ಸಾಲ ನಿವಾರಣೆ ಬೋರ್ಡಿನವರು ರಾಜಿಯಿಂದ ಕಡಿಮೆಮಾಡುವ ಹಳೇ ಸಾಲವನ್ನು ತೀರಿಸಲು ದೀರ್ಘ ಕಂತಿನಲ್ಲಿ ಕಡಿಮೆ ಬಡ್ಡಿಯಲ್ಲಿ ರೈತರಿಗೆ ಸಾಲ ದೊರೆಯುವಂತೆ ಮಾಡಬೇಕು. ಕೆಲವು ಕಡೆ ಮಾಡಿರುವಂತೆ ಸರ್ಕಾರದವರೇ ಕಡಿಮೆ ಮಾಡಿದ ರೈತರ ಸಾಲವನ್ನು ತೀರಿಸಿ, ಅವರಿಂದ ಕಂದಾಯ ವಸೂಲಿ ಮಾಡುವಂತೆ ದೀರ್ಘ ಕಾಲದಲ್ಲಿ, ಬಡ್ಡಿ ಇಲ್ಲದೆ ಯೂ, ಅಲ್ಪ ಬಡ್ಡಿಯಲ್ಲಿ ತಮ್ಮ ಸಾಲವನ್ನು ಮರುಪಾವತಿಮಾಡಿಸಿಕೊಳ್ಳಬಹುದು. ಇದು ಸಾಧ್ಯವಿಲ್ಲದಿದ್ದರೆ ಭೂಮಿಗಿರ್ವಿ ಬ್ಯಾಂಕಿನ ಮೂಲಕ ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡು ಮಾಡತಕ್ಕದ್ದು. ಆದರೆ ಕೊಡಗಿನ ರಿಯಾಯಿತಿ ಭೂಮಿಹಿಡುವಳಿಯ ದೆಸೆಯಿಂದಲೂ, ಇದು ಚಿಕ್ಕ ಪ್ರದೇಶವಾದುದರಿಂದಲೂ ಇಲ್ಲಿ ಭೂಮಿ ಅಡವಾನವ ಬ್ಯಾಂಕನ್ನು ಸ್ಥಾಪಿಸುವುದು ಪ್ರಯೋಜನಕಾರಿಯಲ್ಲ. ಈ ಕಾರಣದಿಂದಲೂ ಮತ್ತು ಹಣದ ಅಭಾವದಿಂದಲೂ ಇಲ್ಲಿ ಇಂಥಾ ಬ್ಯಾಂಕನ್ನು ಸ್ಥಾಪಿಸಲಾಗುವದಿಲ್ಲವೆಂದು ಸರ್ಕಾರದವರು ತೀರ್ಮಾನಿಸಿರುವರೆಂದು ತಿಳಿಯಬರುತ್ತದೆ.

ರೈತರ ಹಳೇ ಸಾಲ ತೀರಿಸಲು ಈ ವರ್ಷ ಇಂಡಿಯಾ ಸರ್ಕಾರದಿಂದ ಐವತ್ತು ಸಾವಿರ ರೂಪಾಯಿ ಪಡೆದು ಸ್ಥಳೀಯ ಸರ್ಕಾರದವರು ದೀರ್ಘ ಕಂತಿನಲ್ಲಿ ರೈತರಿಗೆ ಸಾಲ ಕೊಡುವ ಏರ್ಪಾಡು ಮಾಡಿರುವುದು ನಿಜ. ಆದರೆ ಒಂದು ಕೋಟಿ ರೂಪಾಯಿಗಿಂತ ಹೆಚ್ಚಾಗಿರುವ ಕೊಡಗಿನ ರೈತರ ಸಾಲನಿವಾರಣೆಗೆ ಈ ಚಿಕ್ಕ ಮೊಬಲಗು ಎಲ್ಲಿಗೂ ಸಾಲದು. ಅಲ್ಲದೆ ಅವರ ಸಾಲವನ್ನು ರಾಜಿಯಿಂದ ಇಳಿಸುವ ತಕ್ಕ ಏರ್ಪಾಡು ಇಲ್ಲದೆ ಸಾಲ ಕೊಟ್ಟರುವವರು ಶೇಕಡ 6½ ದರದ ಬಡ್ಡಿಯಲ್ಲಿ ತಮ್ಮ ಹಣವನ್ನು ವಾಪಸು ಪಡಕೊಳ್ಳುವಷ್ಟೆಂದು ಒಪ್ಪಿಗೆಯನ್ನು ಸಾಲಗಾರರು ಪಡೆದರೆ ಮಾತ್ರ ಸರ್ಕಾರದಿಂದ ಸಾಲಕೊಡಲ್ಪಡುವದೆಂದೂ, ಸಹಕಾರಿ ಸಂಘಗಳ ಸಾಲ ಮತ್ತು ಸರ್ಕಾರಿ ತಕಾವಿ ಸಾಲ ವಗೈರೆಯನ್ನು ತೀರಿಸಲು ಈ ಹೊಸ ಸಾಲವು ದೊರೆಯಲಾರದೆಂದೂ ಸರ್ಕಾರದವರು ನಿರ್ಣಯಿಸಿರುವದರಿಂದ ಈ ಹೊಸ ಸಾಲದಿಂದ ವ್ಯವಸಾಯಗಾರರಿಗೆ ಹೆಚ್ಚಿನ ಪ್ರಯೋಜನವಿರುವಂತೆ ಕಾಣುವುದಿಲ್ಲ. ಹಳೇ ಸಾಲದ ಬಡ್ಡಿಯನ್ನು ಕಡಿಮೆ ಮಾಡುವುದು ಮಾತ್ರವಲ್ಲ; ಅಸಲನ್ನೇ ಬಿಡಿಸುವ ಸಂದರ್ಭಗಳೆಷ್ಟೋ ಇವೆ. ಅದನ್ನು ಸಾಧಿಸಲು ಸಾಲ ನಿವಾರಣೆ ಬೋರ್ಡು ಅತ್ಯಗತ್ಯವಾಗಿದೆ. ಸಹಕಾರಿ ಮತ್ತು ತಕಾವಿ ವಗೈರೆ ಸಾಲಗಳ ಬಡ್ಡಿ ಕಡಿಮೆಯೆಂದ ದೆಸೆಯಿಂದ ಇವುಗಳನ್ನು ತೀರಿಸಲು ಹೊಸ ಸಾಲ ಕೊಡುವುದಿಲ್ಲವೆಂದಾದರೆ ವ್ಯವಸಾಯಗಾರರಲ್ಲಿ ಬಹು ಹೆಚ್ಚಿನ ಜನರು ಈ ಮೇಲಿನ ಸಾಲಗಳಿಗೆ ತಮಗಿರುವ ಭೂಮಿಯನ್ನೆಲ್ಲಾ ಅಡವಿಟ್ಟಿರುವ ಕಾರಣ ಅವರಿಗಿರುವ ಹೊರಗಿನ ಸಾಹುಕಾರರುಗಳ ಹೆಚ್ಚಿನ ಬಡ್ಡಿಯ ಸಾಲವನ್ನು ತೀರಿಸಲು ಈ ಹೊಸ ಸಾಲದ ಅನುಕೂಲವು ದೊರೆಯುವಂತಿಲ್ಲವೆಂಬುದು ವ್ಯಸನಕರ. ಈ ಅಡಚಣೆಯಿಂದ ಹೊಸ ಸಾಲವು ಬಹು ಸ್ವಲ್ಪ ಮಂದಿಗೆ ಮಾತ್ರ ಪ್ರಯೋಜನವಾಗುವುದು. ಇದು ಮಾತ್ರವಲ್ಲ; ಈ ಸಾಲವು ಕಂತಿಗೆ ಸರಿಯಾಗಿ ಪುರುಪಾವತಿಯಾಗದೆ ಹೋದಲ್ಲಿ ಅಡವಿಟ್ಟ ಭೂಮಿಯು ಹರಾಜು ಮಾಡಲ್ಪಡುವದು. ಇದರಿಂದ ರೈತನ ಹಿತಕ್ಕೆ ಮುಖ್ಯವಾಗಿ ರಿಯಾಯಿತಿಯ ರೂಢಿಗೆ ಹಾನಿತಟ್ಟುವುದು.

ಈ ತರಹದ ತೊಂದರೆಗಳನ್ನೆಲ್ಲಾ ನಿವಾರಿಸಿಕೊಳ್ಳಲಿಕ್ಕಾಗಿಯೇ ದೀರ್ಘ ಕಂತಿನ ಸಾಲವನ್ನು ಸಹಕಾರಿ ಸಂಘಗಳ ಮೂಲಕ ವ್ಯವಸಾಯಗಾರರಿಗೆ ಕೊಡುವುದು ಉತ್ತಮವಾಗಿದೆ. ಇದಕ್ಕಾಗಿ ಸರಕಾರದವರು ಸಹಕಾರಿ ಸೆಂಟ್ರಲ್ ಬ್ಯಾಂಕಿಗೆ ಒಂದೆರಡು ಲಕ್ಷ ರೂಪಾಯಿಯನ್ನು ಅಲ್ಪ ಬಡ್ಡಿಯಲ್ಲಿ ದೀರ್ಘ ಕಂತಿನಲ್ಲಿ ಸಾಲಕೊಡಬೇಕೆಂದೂ, ಇದು ಸಾಧ್ಯವಿಲ್ಲವಾದರೆ ಈಗ ರೈತರಿಗೆ ಕೊಡಲಿಕ್ಕೆಂದಿರುವ ರೂ. 50,000ದ ಸಾಲವನ್ನು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಮೂಲಕ ಕೊಡಬೇಕೆಂದೂ, ಈ ಬ್ಯಾಂಕಿಗೆ ಬರುವ ದೀರ್ಘ ಅವಧಿಯ ಠೇವಣಾತಿಗಳಿಗೆ ಸರ್ಕಾರದವರು ಭರವಸೆ ಕೊಡಬೇಕೆಂದೂ, ಈ ತರದ ಸಾಲಗಳಿಗೆ ಗಿರ್ವಿಕೊಡುವ ಭೂಮಿಯ ಬೆಲೆ ಕಟ್ಟಲು ರೆವಿನ್ಯೂ ಉದ್ಯೋಗಸ್ಥರ ಸಹಾಯ ಕೊಡಬೇಕೆಂದೂ, ಸೆಂಟ್ರಲ್ ಬ್ಯಾಂಕಿನಲ್ಲಿ ದೀರ್ಘ ಕಂತಿನ ಶಾಖೆಯನ್ನಿಡುವ ಖರ್ಚಿಗಾಗಿ ವಾರ್ಷಿಕ ವಂತಿಗೆ ರೂ. 1500 ಕೊಡಬೇಕೆಂದೂ ಸೆಂಟ್ರಲ್ ಬ್ಯಾಂಕಿನವರು ಸರ್ಕಾರದವರನ್ನು ಕೇಳಿಕೊಂಡಿದ್ದಾರಷ್ಟೆ. ಆದರೆ ಈ ಕೋರಿಕೆಗಳನ್ನು ನೆರವೇರಿಸಲು ಸಾಧ್ಯವಿಲ್ಲವೆಂದು ಸರ್ಕಾರದವರು ಜವಾಬಿತ್ತಿರುವರೆಂದು ತಿಳಿದು ವ್ಯಸನಪಡುತ್ತೇನೆ. ರೈತರ ಸಾಲ ನಿವಾರಣೆ ಬಗ್ಗೆ ಸಾಕಷ್ಟು ದೀರ್ಘ ಕಂತಿನ ಸಾಲವನ್ನು ಕೊಡಲು ಸರ್ಕಾರದವರು ತಯಾರಿಲ್ಲದೆಯೂ, ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕು ಸ್ಥಾಪಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿಯೂ ಇರುವಾಗ್ಯೆ ಸೆಂಟ್ರಲ್ ಬ್ಯಾಂಕಿನವರು ದೀರ್ಘ ಕಂತಿನ ಶಾಖೆಯನ್ನು ತೆರೆಯಲು ತಕ್ಕಷ್ಟು ಪ್ರೋತ್ಸಾಹವನ್ನೀಯಬೇಕಾದ್ದು ಸರ್ಕಾರದ ಕರ್ತವ್ಯವಾಗಿದೆ. ಇಲ್ಲವಾದರೆ ರೈತರನ್ನು ಸ್ವತಂತ್ರ ರದವರು ಆಧೋಗತಿಗೆ ಬಿಟ್ಟಂತಾಗುವದು. ಆದ್ದರಿಂದ ಸೆಂಟ್ರಲ್ ಬ್ಯಾಂಕಿನವರ ಕೋರಿಕೆಗಳನ್ನು ಸರ್ಕಾರದವರು ಪುನರಾಲೋಚನೆ ಮಾಡುವರಾಗಿನಂಬುತ್ತೇವೆ. ಒಂದು ವೇಳೆ ಅವುಗಳನ್ನೆಲ್ಲಾ ನಡಿಸಿಕೊಡಲು ಸಾಧ್ಯವಿಲ್ಲದಿದ್ದರೂ ಅವುಗಳಲ್ಲಿ ಮುಖ್ಯವಾದವುಗಳಿಗಾದರೂ ಒಪ್ಪಿ ಈ ಬ್ಯಾಂಕಿನ ಮೂಲಕ ರೈತರಿಗೆ ದೀರ್ಘ ಕಂತಿನ ಸಾಲ ದೊರೆಯುವಂತೆ ಏರ್ಪಾಡು ಮಾಡುವರಾಗಿ ಆಶಿಸುತ್ತೇವೆ. ರೈತರ ಈಗಿನ ಸ್ಥಿತಿಯು ಮತ್ತಷ್ಟೂ ಹೀನವಾಗಲು ಬಿಡುವದು ಸರ್ಕಾರದವರಿಗೆ ಎಂದೂ ಯೋಗ್ಯವಲ್ಲ.

ಪಂ ಡಿ ತ ನೆ ಹ ರೂ ರ ವ ರ ಆ ಗ ಮ ನ.

ವಿದೇಶಗಳ ರಾಜಕೀಯ ಪರಿಸ್ಥಿತಿಗತಿಗಳನ್ನು ಕಣ್ಣಾರೆ ಕಂಡು ಅನುಭವ ಮಾಡಿಕೊಂಡು ಬರಬೇಕೆಂದು ಏಳು ತಿಂಗಳ ಹಿಂದೆ ಯೂರೋಪಿಗೆ ಪ್ರಯಾಣ ಮಾಡಿದ್ದ ಪಂಡಿತ ಜವಾಹರಲಾಲ್ ನೆಹರೂರವರು ತಿಮ್ಮಕ್ಕುನೂರ್ತಿಯೊಡನೆ ತಾ.17ರ ಗುರುವಾರ ಬೊಂಬಾಯಿನಲ್ಲಿ ಬಂದಿಳಿದರು. ಸುಮಾರು 200 ಸಂಸ್ಥೆಗಳವರೂ ಕಾಂಗ್ರೆಸ್ಸಿನವರೂ ಸಹ ಅವರನ್ನು ಆದರದಿಂದ ಸ್ವಾಗತಿಕರಿಸಿದರು. ಆವರು ಆ ಸಮಯದಲ್ಲಿ ಒಂದು ಪುಟ್ಟ ಭಾಷಣವನ್ನು ಮಾಡಿದರು. ಪ್ರಪಂಚವು ಈ ದಿನ ರಾಜ ವಿಪ್ಲವಕಾರವಾದ ಬದಲಾವಣೆಯನ್ನು ನೋಡುತ್ತಲಿರುವುದು. ಪ್ರಪಂಚದ ನಕ್ಷೆಯನ್ನು ಪುನಹ ಪುನಹ ಅಲ್ಲಲ್ಲಿ ಬದಲು ಮಾಡಿ ಬರೆಯುತ್ತಿದ್ದಾರೆ. ಬಲಾಢ್ಯವಾಗಿಯೂ, ಐಕ್ಯತೆಯಿಂದಲೂ ಕೂಡಿರುವ ಜನಾಂಗಗಳವರು ಮಾತ್ರ ಈಗ ಸ್ವರಾಜ್ಯವನ್ನು ಸಂಪಾದಿಸಿಕೊಂಡು ಅದನ್ನು ಉಳಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು. ಆವರು ಯೂರೋಪಿನ ರಾಜಕೀಯ ವಿಷಯವನ್ನೆತ್ತಿ ಮಾತನಾಡುತ್ತಾ—ಬ್ರಿಟಿಷ್ ಸರ್ಕಾರದ ಈಗಿನ ನೀತಿಯು ನನಗೆ ದಿಗ್ಭ್ರಮೆಯನ್ನುಟ್ಟುಮಾಡಿದೆ. ನನ್ನ ಹಿಂದಿನ ಅಭಿಪ್ರಾಯಗಳನ್ನೆಲ್ಲಾ ಅದು ಅದಲು ಬದಲು ಮಾಡಿದ್ದೆ- ಈ ಸರ್ಕಾರವು ಯೂರೋಪಿನಲ್ಲಿ ಫ್ಯಾಸಿಸ್ಟ್ ಮತ್ತು ನಾಜಿ ನಿಯಮ ನೀತಿಗಳು ಬೆಳೆದು ಬರುವಂತೆ ಅದರ ಹಿತವನ್ನು ಬಯಸಿ ಅವುಗಳಿಗೆ ಉತ್ತೇಜನ ಕೊಡುವ ರೀತಿಯಲ್ಲಿ ನೆರ್ತಿಸುತ್ತಿದೆ ಎಂದು ಹೇಳಿದರು. ಕೆಲವರ ನೆಯಲ್ಲಿ ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳ ವಿಷಯವಾಗಿ ಅವರು ಅಭಿಪ್ರಾಯಪಟ್ಟದ್ದೇನೆಂದರೆ—ದೇಶೀಯ ಸಂಸ್ಥಾನಗಳು ಪ್ರಜೆಗಳ ಆಶಯಗಳಿಗೆ ಕುಂದಕವಾಗಿರುವುದರಿಂದ ಅವು ಹಳೆಯ ಕಾಲದವುಗಳಾಗಿಯೂ, ಹಾನಿಕಾರಕಗಳಾಗಿಯೂ ಇವೆ. ಈ ಪದ್ಧತಿಯು ಹೋಗಬೇಕು. ಅದು ಹೇಗೆಂಬದನ್ನು ಹೇಳುವುದು ಕಷ್ಟ. ನಿರಂಕುಶಪ್ರಭುತ್ವವನ್ನೂ, ಜಹಗೀರು ಪದ್ಧತಿಗಳನ್ನೂ ಮೊದಲೆ ಸಲಿಸಿಕೊಂಡು ಬರುವುದು ಸಾಧ್ಯವಲ್ಲ ಎಂದು ಹೇಳಿದರು.

—೦೦—

ಒಳದೇಶ.

ಇಗ್ಗುತ್ತಪ್ಪ ದೇವರ ಕಲಾಡ್ಚಿ ಹಬ್ಬವು ಡಿಸೆಂಬರ್ ತಾ. 6 ನೇ ಮಂಗಳವಾರವೂ, ಆದೇ ದಿನ ದೇವ ಪೊಳದೂ, ಮೂರಣೆ ದಿನ ತಾ. 7 ನೇ ಬುಧವಾರ ನಾಡು ಪೊಳದೂ ಆಗುವದೆಂದು ತಿಳಿಯುತ್ತೇವೆ. ಇವರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಮಡಿಕೇರಿ.

ಇಲ್ಲಿ ಏಲಕ್ಕಿ ಮಣಕ್ಕೆ ರೂ. 27 ರವರೆಗೆ ಕ್ರಯವಿದೆಯೆಂದೂ, ಕಾಫಿ ಖಂಡಿಗೆ ರೂ. 107 ರ ವರೆಗೆ ಇದೆಯೆಂದೂ ತಿಳಿಯುತ್ತೇವೆ.

ಕಾಟಕೇರಿ ಗ್ರಾಮದ ಅಚ್ಚಲ್ಪಾಡಿ ಜೋಯಪ್ಪನೆಂಬವನು ಈ ತಾ. 23 ರ ರಾತ್ರಿ ಉಳಿ ಕೂರಲು ಮರಕ್ಕೆ ಹತ್ತುತ್ತಿರುವಾಗ್ಯೆ ಆಕಸ್ಮಾತ್ತಾಗಿ ತನ್ನ ಕೋವಿಯಿಂದ ಗುಂಡು ಹಾರಿ ಬಹಳ ಜಖಂ ಆಗಿದೆಯೆಂದೂ, ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವುದಾಗಿಯೂ ತಿಳಿಯಬರುತ್ತದೆ.

ನೆ. ಅಪ್ಪಂರಂಡ ಮಾದಪ್ಪನವರ ಕತ್ತಲೆಕಾಡು ತೋಟದಲ್ಲಿದ್ದ ವಕ್ಕಲಿಗರ ತಿಮ್ಮಮ್ಮನೆಂಬವಳು ವಾಸವಿದ್ದ ಲೈನ್ ಮನೆಗೆ ಈ ತಾ. 12 ರಲ್ಲು ಆದೇ ತೋಟದಲ್ಲಿ ಕೆಲಸಮಾಡುತ್ತಿದ್ದ ಬಟ್ಟಪ್ಪನೆಂಬವನು ನುಗ್ಗಿ, ಒಂದು ಪಾತ್ರೆಯಲ್ಲಿ ಹೂತಿಟ್ಟ 650 ರೂಪಾಯಿಗಳನ್ನು ಕದ್ದನಾಗಿಯೂ, ಕೇಸು ಪೊಲೀಸ್ ವಿಚಾರಣೆಯಲ್ಲಿ ಇದೆಯೂಗಿಯೂ ವರ್ತಮಾನ.

ಮದ್ರಾಸಿನ ಪಿ. ಡಬ್ಲ್ಯು ಡಿ. ಇಲಾಖೆಯ ಮಂತ್ರಿಗಳಾದ ಶ್ರೀ ಯಾಕೂಬ್ ಹಸೇನ್‌ರವರು ಈ ತಾ. 21ರಲ್ಲಿ ಮಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಇಲ್ಲಿಯ ಜಮಿನ್ದಾರರ ಸಂಘದ ಹಾಲ್ ಬಳಿ ಸೇರಿದ್ದ ಸಭೆಯಲ್ಲಿ ಕೊಡಗು ಡಿ. ಕಾಂಗ್ರೆಸ್ ಕಮಿಟಿಯ ಮತ್ತು ಮುಸ್ಲಿಮರ ಎರಡು ಮಾನಪತ್ರಗಳು ಅರ್ಪಿಸಲ್ಪಟ್ಟವು. ನಂತರ ಆವರು ಒಂದು ಭಾಷಣವಿತ್ತರು. (ಇದರ ವಿವರವು ಇನ್ನೊಂದೆಡೆ ಕೊಡಲಾಗಿದೆ.) ಆದೇ ದಿನ ಅವರೂ ಮಧ್ಯಾಹ್ನದ ಮೇಲೆ ಕಾಸರಗೋಡಿಗೆ ಹೋದರು.

ವೀರಾಜಪೇಟೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ವಾರ್ಷಿಕ ಮಹಾ ಸಭೆ ಮತ್ತು ಸಹಕಾರ ಸಮ್ಮೇಳನಗಳು ಡಿಸಂಬರ್ ತಾ. 17 ಮತ್ತು 18 ರಲ್ಲಿ ವೀರಾಜಪೇಟೆಯಲ್ಲಿ ನಡೆಯುವದೆಂದೂ, ಮಹಾ ಸಭೆಯ ಅಧ್ಯಕ್ಷಸ್ಥಾನವನ್ನು ಸಹಕಾರಿ ಸಂಘಗಳ ರಿಜಿಸ್ಟ್ರಾರವರೂ, ಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರು ಸರ್ಕಾರವ ವ್ಯವಸಾಯ ಇಲಾಖೆಯ ನಿವೃತ್ತ ಡೈರೆಕ್ಟರರಾಗಿರುವ ಶ್ರೀ ಯಜ್ಞನಾರಾಯಣರವರೂ ಅಲಂಕರಿಸುವರಾಗಿ ವರ್ತಮಾನ.

ಪೊನ್ನಂಪೇಟೆ.

ಕಾನೂರು ಮತ್ತು ಕೋತೂರು ಸ್ಕೂಲ್ ಮೈದಾನದಲ್ಲಿ ದನಗಳ ಪ್ರದರ್ಶನವೊಂದು ಡಿಸೆಂಬರ್ ತಾ. 2 ರಲ್ಲು ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ವರ್ತಮಾನ ಸಂಗ್ರಹ.

ಕುಂದದ ಬೆಟ್ಟದ ದೇವರ ಭಂಡಾರದ ವಿಷಯದಲ್ಲಿ ಬೆಟ್ಟತ್ತುನಾಡಿನವರಿಗೂ, ಮನೆಯಪಂಡ ಕುಟುಂಬಸ್ತರಿಗೂ ಕಳೆದ ಹತ್ತು ಹನ್ನೆರಡು ವರ್ಷಗಳಿಂದ ಇದ್ದ ತಕರಾರಿನ ವಿಚಾರ ಕಳೆದ ತಾ. 12 ರಲ್ಲು ನಾಡವರು ಮತ್ತು ಮನೆಯಪಂಡ ಕುಟುಂಬಸ್ತರು ಸೇರಿಕೊಂಡು ಇನ್ನು ಮುಂದೆ ಬೆಟ್ಟದ ದೇವರ ಭಂಡಾರವ ಹಣವಲ್ಲಿ ಅಲ್ಲಿಯ ಉತ್ಸವದ ಖರ್ಚು ಕಳೆಸು ಶಿಲ್ಕು ನಿಂತ ಹಣವನ್ನು ಮುಗುಟಗೇರಿ ಗ್ರಾಮಸ್ಥರು ನಾಡು ದೇವಸ್ಥಾನದ ಖರ್ಚಿಗೆ ಕೊಡತಕ್ಕದೆಂದು ತೀರ್ಮಾನಿಸಿ ರಾಜಿಯಾಗಿರುವರೆಂದು ವರ್ತಮಾನ.

ನಾಪೋಕ್ಲು.

ಕೊಟ್ಟಮುಡಿ ಸೇತುವೆಯು ಮೋಟಾರು ವಹಿವಾಟಿಗೆ ಸಿದ್ಧವಾಗಿದೆಯೆಂದೂ, ಬಸ್ಸುಗಳು ನಾಪೋಕ್ಲಿನ ವರೆಗೆ ಹೋಗುತ್ತದೆಯೆಂದೂ ವರ್ತಮಾನ.

ಕಳೆದ ಹಿಂದೀ ಪರೀಕ್ಷೆಯಲ್ಲಿ ನಾಪೋಕ್ಲು ಕೇಂದ್ರದಿಂದ ಶ್ರೀ ಯಂ. ಆರ್. ಸುಬ್ರಾಯರೂ, ಶ್ರೀ ಯಂ. ಯಸ್. ದೇವಯ್ಯನವರೂ ಪ್ರಾಥಮಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನಕ್ಕೆ ಶ್ರೀಮತಿ ಕಲ್ಯಾಣಮ್ಮನವರು ಬರುವರೆಂದು ಕಳೆದ ವಾರ ಪ್ರಕಟಿಸಲಾಗಿತ್ತಷ್ಟೆ. ಆವರೆ ಇತ್ತೀಚೆಗೆ ಅವರು ತಮ್ಮ ಅನಾನುಕೂಲತೆಯನ್ನು ಸೂಚಿಸಿರುವರಾಗಿ ತಿಳಿಯುತ್ತೇವೆ.

ಸೋಮವಾರಪೇಟೆ.

ಈ ತಾ. 26 ನೇ ಸೋಮವಾರ ಇಲ್ಲಿಯ ಚೌಡ್ಲು ಗ್ರಾಮದ (ಆಲಿಕಟ್ಟಿ ರಸ್ತೆಯ ಕರೆ) ಲ್ಲಿ ತಲೆ ಮತ್ತು ಬಲವಕ್ಕೆ ಇಲ್ಲದ ಒಂದು ಶವವನ್ನು ಕಂಡರೆಂದೂ, ಪೊಲೀಸಿನವರು ಈ ಸಂಗತಿ ತನಿಖೆ ನಡಿಸಿವಲ್ಲಿ ಸೂರ್ಲಬಿ ಗ್ರಾಮದ ಅಣ್ಣಯ್ಯ ಆಚಾರಿ ಎಂಬವನು ಬಾಚಳ್ಳಿ ಗ್ರಾಮವ ಪುಷ್ಪಾಚಾರಿ ಎಂಬವನನ್ನು ಕೊಂದುದಾಗಿಯೂ, ಅಪರಾಧಿಯು ಪರಾರಿಯಾಗಿರುತ್ತಾನಾಗಿಯೂ, ತಲೆ ಮತ್ತು ಕೈ ಪತ್ತೆಯಾಗಿಲ್ಲವಾಗಿಯೂ, ಪೊಲೀಸಿನವರು ಈ ಸಂಬಂಧ ವಿಚಾರಣೆ ನಡಿಸುತ್ತಿರುವರಾಗಿಯೂ ವರ್ತಮಾನ.

ಇಲ್ಲಿಯ ಚಿನ್ನಬಸಪ್ಪ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆವ 'ಮೈಜಿಕ್ ಶೋ' ಸಮಯದಲ್ಲಿ ಜಮೆಯಾಪ ಹತ್ತು ರೂಪಾಯಿಗಳ ಜೊತೆಗೆ ಕೊಡಗು ಕಮಿಷನರ್ ಸಾಹೇಬರ ಪತ್ನಿ ಮಿಸೆಸ್ ಫ್ರೇಜರ್‌ರವರು ಸ್ವಹಸ್ತದಿಂದ ಹತ್ತು ರೂಪಾಯಿ ಸೇರಿಸಿ ಈ ಶಾಲೆಯ ಬಾಲಚಮೂ ದಳಕ್ಕೆ ಉದಾರ ಮನಸ್ಸಿನಿಂದ ದಯಪಾಲಿಸಿರುತ್ತಾರೆಂದೂ, ಆ ಬಗ್ಗೆ ಮಿಸೆಸ್ ಫ್ರೇಜರರಿಗೂ, ಪುರವಣಿಗರಿಗೂ ಶಾಲಾ ಹೆಡ್ಮಾಸ್ಟರರು ವಂದನೆಯನ್ನರ್ಪಿಸುತ್ತಾರೆಂದೂ ಈ ಮೂಲಕ ತಿಳಿಸುತ್ತಾರೆ.

ಶನಿವಾರಸಂತೆ.

ಈ ತಾ. 23 ರಲ್ಲಿ ಈ ಹೋಬಳಿಯ ಜಮೂಬಂದಿಯು ಕೊಡಗು ಕಮಿಷನರ್ ಸಾಹೇಬರವರಿಂದ ನಡೆಸಲಾಯಿತು. ಜಮೂಬಂದಿಯಲ್ಲಿ ಸುಮಾರು ನಾನೂಗು ಕಂದಾಯ ಮೂಫಿಗೋಸ್ಕರ ಅರ್ಜಿಗಳಿದ್ದವೆಂದು ತಿಳಿಯಬರುತ್ತದೆ.

ನಿಧನ ವಾರ್ತೆ.

ಈ ತಾ. 20 ರಲ್ಲಿ ಮೇಕೂರುಹೊಸಕೇರಿ ಗ್ರಾಮವ ಶ್ರೀ ಪುಲಿಯಂಡ ಮುನ್ನಪ್ಪನವರು ಮೃತರಾದರೆಂದು ತಿಳಿದು ವಿಷಾದಿಸುತ್ತೇವೆ.

ನಿವೃತ್ತ ಡಿಪ್ಯುಟಿ ಡೈರೆಕ್ಟರಾದ ಶ್ರೀ ಕೆ. ಯನ್. ಸುಬ್ರಾಯನವರು ಈ ತಾ. 24 ರ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಚೆಂಬೆಬೆಳ್ಳಿಯೂರು ಗ್ರಾಮವ ಶ್ರೀ ಚೆಂಬಂಡ ಉತ್ತಪ್ಪನವರು ಈ ತಾ. 23 ರಲ್ಲಿ ಗದ್ದೆಗೆ ಎತ್ತು ಹೊಡೆದುಕೊಂಡು ಹೋದವರು ಮೊಣಕಾಲು ವರೆಗೆ ನೀರಿದ್ದ ತೋಡಿಗೆ ಬಿದ್ದು ಮೃತರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಹಿಂದೂದೇಶ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು, ಇಷ್ಟರಲ್ಲೇ, ತಮಗೆ ಅಶಕ್ತಿ ಇದ್ದರೂ ಕೂಡ, ತಮ್ಮ ಮಂತ್ರಿ ಪದವಿಯ ಉದ್ಯೋಗಸ್ಥಾನವನ್ನು ವಹಿಸಿಕೊಂಡಿರುವರು.

ಈ ವಾರವಲ್ಲಿ ನಡೆಯಲಿಕ್ಕಿದ್ದ ಕರ್ನಾಟಕ ವಿದ್ಯಾಪರಿಷತ್ತು ಮಾನ್ಯ ಮಂತ್ರಿಗಳಾದ ಬಿ. ಜಿ. ಖೇರರವರ ಆಗಮನದ ಅನುಕೂಲದಂತೆ ಡಿಸೆಂಬರು 6 ಮತ್ತು 7 ಕ್ಕೆ ಮುಂದರಿಸಲ್ಪಟ್ಟಿದೆ.

ಕೊಚ್ಚಿಯ ದಿವಾನರಾವ ಸರ್. ಆರ್. ಕೆ. ಷಣ್ಮುಗಂ ಚೆಟ್ಟಿಯಾರರು ಸ್ವದೇಶಕ್ಕೆ ಹಿಂದಿರುಗಿದರು. ಕೊಚ್ಚಿಯ ಪ್ರಜೆಗಳ ಒಪ್ಪಿಗೆ ಇದ್ದಲ್ಲಿ, ಕೆಲವು ಮಂದಿ ಯೆಹೂದಿಗಳಿಗೆ ಕೊಚ್ಚಿಯಲ್ಲಿ ಆಶ್ರಯ ಕೊಡಬೇಕೆಂಬ ಯೋಜನೆ, ಈ ದಿವಾನರಿಗಿಷ್ಟೆ.

ಮುಸ್ಲಿಂ ಲೀಡರ ಪ್ರೆಸಿಡೆಂಟರಾದ ಮಿ. ಜಿನ್ನಾ ಸಾಹೇಬರ ಮಗಳು ಮಿ. ನೆವಿಲ್ ನೆಸ್ ವಾಡಿಯಾ ಎಂಬೊಬ್ಬ ಕ್ರೈಸ್ತ ಶ್ರೀಮಂತ ತರುಣನನ್ನು ತಾ. 15ನೇ ದಿನ ಮದುವೆಯಾದಳು. ಲಗ್ನವು ಕ್ರೈಸ್ತ ಧರ್ಮದ ವಿಧಿಗಳಿಗನುಸರಿಸಿ ಜರುಗಿತು.

ಋಣ ನಿವಾರಣಾ ಕಾನೂನಿನ ಪರಿಣಾಮವಾಗಿ ನಮ್ಮ ಆಧಿಪತ್ಯದ ಸಾಲದಲ್ಲಿ 76,09,788 ರೂಪಾಯಿಗಳ ಸಾಲ, ಈಗ ರೂ. 3565,178 ಕ್ಕೆ ತಗ್ಗಿಸಿ ಎಂದು ಪ್ರಕಟವಾಗಿದೆ. ಆವರೆ, ಸಾಲ ಸಿಗುವ ಕಷ್ಟ, ಭಣಗೆಗಳನ್ನು ಆ ಬಡ ರೈತನೇ ಬಲ್ಲ.

ಮುಂದಿನ ಜನವರಿಯಲ್ಲಿ ಮೈಸೂರಿಗೆ ವೈಸರಾಯರು ಬಂದಾಗ ಬೆಡ್ಡಕ್ಕೆ ತೆರಳುವರಷ್ಟೆ. ಆಗ ಶುದ್ಧ ಖಾದಿಯಿಂದಲೇ ರಚಿತವಾದ ಬಿಡಾರವೊಂದನ್ನು ರಚಿಸಬೇಕೆಂದಿರುವುದಾಗಿ ಗೊತ್ತಾಗಿದೆ. ಇದಕ್ಕೆ 1000 ರೂ. ಗಳ ಖಾದಿ ಬಳಸಲಾಗುವುದಂತೆ.

ಡಾ. ಪಟ್ಟಾಭಿ ಸೀತಾರಾಮಯ್ಯನವರು, ಬೊಂಬಾಯಿಗೆ ಹೋಗುತ್ತಿದ್ದ ಕಾಲದಲ್ಲಿ, ಹೈದರಾಬಾದ್ ಸಂಸ್ಥಾನದ ಒಬ್ಬ ಪೊಲೀಸ್ ಅಧಿಕಾರಿಯು, ಸೆಕುಂದರಾಬಾದಿನ ಬಳಿ, ಅವರ ಪ್ರವೇಶವು ಆ ಸಂಸ್ಥಾನದೊಳಗೆ ನಿಷೇಧಿಸಲ್ಪಟ್ಟಿದೆ ಎಂದು ತಿಳಿಸಲು, ಶ್ರೀಯುತರು ಅದಕ್ಕೆ ತಕ್ಕ ಸಮಾಧಾನ ಹೇಳಿ, ಅದೇ ಮಾರ್ಗವಾಗಿಯೇ ಮುಂದೆ ತೆರಳಿದರು.

ನಮ್ಮ ಮಾನ್ಯ ವೈಸರಾಯರು, ಹೈದರೇಶನಿನ ವಿಚಾರವನ್ನು, 120 ಮಂದಿ ದೇಶೀಯ ಪ್ರಭುಗಳಲ್ಲಿ ಪ್ರಸ್ತಾವಿಸಿ, ಆ ವುಗಳಲ್ಲಿ ಅಗತ್ಯವಿರುವಷ್ಟು ಸಂಖ್ಯೆಯ ಸಂಸ್ಥಾನಗಳು ಈ ಯೋಜನೆಯನ್ನೊಪ್ಪದಿದ್ದರೆ, ಬ್ರಿಟಿಷ್ ಇಂಡಿಯೂ ಹಾಗೂ ಸಂಸ್ಥಾನಗಳ ಪ್ರತಿನಿಧಿಗಳ ಒಂದು ಉರ್ಟು ಮೇಜಿನ ಕಾನ್ಫರೆನ್ಸನ್ನು ಕೂಡಿಸಲಾಗುವುದೆಂದೂ, ಹೈದರೇಶನಿನ ಪ್ರವೇಶವು 1941 ನೇ ಇಸ್ವಿಗೆ ಮೊದಲಾಗುವ ಸಂಭವವಿಲ್ಲವೆಂದೂ ಖಾತರಿಯಾಗಿ ತಿಳಿದು ಬರುತ್ತದೆ.

ರಾಷ್ಟ್ರಪತಿ ಸುಭಾಷ ಬೋಸರು ನವಂಬರ 21 ಕ್ಕೆ ಕಾನಪುರಕ್ಕೆ ಹೋದರು. ಕಾನಪುರದಿಂದ ಲಾಹೋರಕ್ಕೆ ಹೋಗುವರು. ಲಾಹೋರದಲ್ಲಿ ಒಂದು ವಾರ ಉಳಿಯುವರು. ಈ ಅವಧಿಯಲ್ಲಿ ಪಂಜಾಬದಲ್ಲಿಯ ಕಾಂಗ್ರೆಸ್ ಚಟುವಟಿಕೆಗಳ ಬಗ್ಗೆ ಕಾಂಗ್ರೆಸ್ಸಿಗರ ಕೂಡ ಚರ್ಚಿಸುವರು. ಲಾಹೋರದಿಂದ ಕರಾಚಿ, ಹೈದ್ರಾಬಾದಗಳಿಗೆ ಹೋಗಿ ಕಲಕತ್ತೆಗೆ ಹೋಗುವರು. ಅಲ್ಲಿ ಕೆಲ ದಿನ ಇದ್ದು ವರ್ಕಿಂಗ್ ಕಮಿಟಿ ಸಭೆಗಾಗಿ ವರ್ಧಾಕ್ಕೆ ಹೊರಡುವರು. ಈ ಸಭೆ ಮುಗಿದ ನಂತರ ಮದ್ರಾಸ ಸಂಚಾರಕ್ಕೆ ಹೋಗುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯನ್ನು ಡಿಸೆಂಬರ್ 8 ರಿಂದ ಇಡಿರೆಂದು ಬೋಸರು ಆಚಾರ್ಯ ಕೃಪಾಲಿನಿಯವರಿಗೆ ತಿಳಿಸಿರುವರು.

ವಿದೇಶ

'ಬ್ರಿಟಿಷ್ ಸರಕಾರ, ತಮ್ಮ ಅಧಿಕಾರದೊಳಗಿನ ಯಾವ ವಸಾಹತನ್ನೂ, ಇತರರಿಗೆ ವರ್ಗಮೊಡ್ಡುವುದಿಲ್ಲ!' ಎಂದು, ಡೊಮಿನಿಯನ್ ಮತ್ತು ಕಾಲನಿಗಳ ಸೆಕ್ರೆಟರಿಯಾದ ಮಿ. ಮೆಕ್ಕ್ಯಾಂ ಮೆಡ್ಡನಾಲ್ಡರು, ಕಾಮನ್ಸ್ ಸಭೆಯಲ್ಲಿ ಎಲ್ಲರಿಗೂ ಧೈರ್ಯ ಹೇಳಿದರು.

ಜರ್ಮನಿ ಸರಕಾರದ ಸೆರೆಯಲ್ಲಿದ್ದ ಆಸ್ಟ್ರಿಯಾದ ಮಾಜಿ ಸರ್ವಾಧಿಕಾರಿ ಡಾ. ಶುಶ್ನಿಗ್ಗರಿಗೆ ಜರ್ಮನ್ ಸರಕಾರದವರು ದೋಷಮುಕ್ತನೂಡಿ ಸ್ವಲ್ಪ ತಿಂಗಳುಗಳಲ್ಲಿಯೇ ಬಿಡುವರಿದ್ದಾರೆ. ಬಿಡುಗಡೆ ಹೊಂದಿದ ಮೇಲೆ ಶುಶ್ನಿಗರನ್ನು ಜರ್ಮನಿ ಬಿಟ್ಟು ಹೊರಗೆ ಹೋಗಲಿಕ್ಕೆ ಬಿಡಲಿಕ್ಕಿಲ್ಲ.

ದಿವಂಗತ ಕೆಮಲ್ ಪಾಶಾರವರ ಶವಸಂಸ್ಕಾರ ಕಾಲದಲ್ಲಿ, ಒಂದು ಲಕ್ಷಕ್ಕೂ ಮಿಕ್ಕಿದ ಮಂದಿಯ ಮೆರವಣಿಗೆ ಇತ್ತು. ಜನಸಂದಣಿಯ ಗಲಭೆಯಲ್ಲಿ ನೂಕು-ನುಗ್ಗಿನಿಂದ ಸತ್ತವರು 11 ಮಂದಿ; ಗಾಯಗೊಂಡವರು ಮೂರಾರು ಮಂದಿ, ಸ್ಮೃತಿ ತಪ್ಪಿ ಬಿದ್ದವರು, ಹೆಂಗಸರು-ಮಕ್ಕಳು ಕೂಡಾ ಸುಮಾರು 1 ಸಾವಿರ ಮಂದಿ.

ಸಿಬ್ಬಂದಿ ಖೋತೆ.

ಗಜೆಟಿನಲ್ಲಿ ಪ್ರಕಟವಾದ ಕೆಲವು ಅಂಶಗಳು.

ಚೀಫ್ ಕಮಿಷನರ ಅಧಿಕಾರಕ್ಕೊಳಪಟ್ಟ ಸಂಸ್ಥೆಗಳಲ್ಲಿ ಈ ಕೆಳಗಿನಂತೆ ಖೋತೆಯನ್ನು ಮಾಡಲು ಹುಕುಂ ಆಗಿದೆ. ಅದರಂತೆ ಕೆಲವು ಪಾರುಪತ್ಯಗಾರರು, ಶಾನುಭೋಗರು, ಎಕ್ಸೈಸ್ ಇನ್ಸ್‌ಪೆಕ್ಟರು, ಒಬ್ಬ ಅಬ್ಕಾರಿ ಇನ್ಸ್‌ಪೆಕ್ಟರು, ಕೆಲವು ಫಾರೆಸ್ಟರು, ಮತ್ತು ಗಾರ್ಡುಗಳು, ಒಬ್ಬ ಜೈಲು ವಾರ್ಡರು, ಕೆಲವು ಸಬ್ ಇನ್ಸ್‌ಪೆಕ್ಟರುಗಳು, ಪೊಲೀಸು ರೈಟರುಗಳು, ಪೊಲೀಸರು ಮತ್ತು ಚಾವಡಿಕಾರರ ಪಡೆ, ಎಗ್ಸಿಕ್ಯುಟಿವ್ ಇನ್ಸ್‌ಪೆಕ್ಟರು, ಡಿಸ್ಟ್ರಿಕ್ಟ್ ವೆಟರಿನರಿ ಆಫೀರು ಮತ್ತು ಒಬ್ಬ ಸಹಕಾರಿ ಸಂಘಗಳ ಇನ್ಸ್‌ಪೆಕ್ಟರರು ಸಹ ತೆಗೆಯಲ್ಪಡುತ್ತಾರೆ.

ಲ್ಯಾಂಡ್ ರೆವಿನ್ಯೂ, ಫಾರೆಸ್ಟು, ರಿಜಿಸ್ಟ್ರೇಶನ್, ಜುಡಿಶಿಯಲ್ ಸಿಬ್ಬಂದಿ, ಪೊಲೀಸ್, ವ್ಯವಸಾಯ ಮತ್ತು ಸಿವಿಲ್ ಇಲಾಖೆಗಳಲ್ಲಿ ಕೆಲವು ಖೋತೆಯಾಗುವದೆಂದೂ, ವಿರಾಜಪೇಟೆ ಮತ್ತು ಮಡಿಕೇರಿ ಸಬ್ ಮೇಜಿಸ್ಟ್ರೇಟರನ್ನೂ, ಅಮೀನರನ್ನು ಮತ್ತು ಪ್ರೊಸೆಸ್ ಸರ್ವರುಗಳಲ್ಲಿ ಕೆಲವು ಖೋತೆಯೆಂದೂ, ಎರಡು ಹೈಸ್ಕೂಲುಗಳ ಮತ್ತು ಸರ್ಕಾರಿ ಮೋಡೆಲ್ ಪ್ರೈಮರಿ ಶಾಲೆಗಳ ಸಿಬ್ಬಂದಿಯಲ್ಲಿ ಖೋತೆಯೆಂಬೂ, ಹುಡುಗರ ಶಾಲೆಯೊಂದಿಗೆ ಹುಡುಗಿಯರ ಶಾಲೆಯನ್ನು ಸಂಯೋಜಿಸುವಮು, ಶಾಲಾ ಸೂಪರ್‌ವೈಜರುಗಳ ಹುದ್ದೆಯನ್ನು ತೆಗೆದು ಅವರ ಬದಲಿಗೆ ಒಬ್ಬ ಅಸಿಸ್ಟೆಂಟ್ ವಿದ್ಯಾಧಿಕಾರಿಯನ್ನು ನೇಮಕ ಮಾಡುವಂತೆಯೂ ಪ್ರಕಟವಾಗಿದೆ.

ಹೊಸದಾಗಿ ಉದ್ಯೋಗಕ್ಕೆ ಸೇರುವವರಿಗೆ ಮದರಾಸಿನಲ್ಲಿ ಜಾರಿಯಿರುವ ದರದ ಸಂಬಳ, ಪಕೇಲರುಗಳ ಸಂಬಳದಲ್ಲಿ ಖೋತೆ, ಎರಡು ನಾಡುಖಜೇರಿಗಳನ್ನು ತೆಗೆಯುವದು, ಪ್ರಯಾಣ ಬತ್ತೆ ಕಡಿಮೆ ಮಾಡುವದು, ಪ್ರತಿ ಇಲಾಖೆ ಕೆಳತರಗತಿಯ ಸಿಬ್ಬಂದಿಗಳನ್ನು ಕಡಿಮೆ ಮಾಡುವದು, ಎರಡು ಪೊಲೀಸು ಸ್ಟೇಷನುಗಳನ್ನು ತೆಗೆಯುವದು, ಇನ್ಸ್‌ಪೆಕ್ಷನ್ ಬಂಗ್ಲೆಗಳಲ್ಲಿ ಕೆಲವನ್ನು ವಜಾಮಾಡುವದು, ಡಿಸ್ಟ್ರೇಷನರಿ ಗ್ರಾಂಟು, ಪ್ರಿಂಟಿಂಗ್ ಮತ್ತು ಸ್ಟೇಷನರಿ ಖರ್ಚನ್ನು ಕಡಿಮೆ ಮಾಡುವೆದೆಂದು ಪ್ರಕಟವಾಗಿದೆ.

ಉತ್ಪತ್ತಿ ಹೆಚ್ಚಿಸುವ ವಿಚಾರ.

ಪರದೇಶಗಳಿಂದ ಬರುವ ಸಾರಾಯಿಗಳ ಮೇಲೆ ಫೀಸು ಹಾಕುವದು, ಫಾರೆಸ್ಟು ಇಲಾಖೆಯ ಉತ್ಪತ್ತಿ ಹೆಚ್ಚಿಸಲು ಯೋಗ್ಯ ಕ್ರಮ ಕೈಕೊಳ್ಳುವದು, ಸ್ಕೂಲ್ ಫೀಸನ್ನು ಮದ್ರಾಸಿನ ಮಟ್ಟಕ್ಕೆ ಏರಿಸುವದು, ಸಹಕಾರಿ ಸಂಘಗಳ ಪಸ್ತಾವೇಜುಗಳಿಗೆ ಅರ್ಧ ಸ್ಟ್ಯಾಂಪು ಮತ್ತು ರಿಜಿಸ್ಟ್ರೇಸನ್ ಚಾರ್ಜು ಹಾಕುವದು, ಇನ್‌ಸ್ಪೆಕ್ಷನ್ ಬಂಗ್ಲೆಗಳನ್ನು ಉಪಯೋಗಿಸುವ ನೌಕರರಿಂದ ಬಾಡಿಗೆ ವಸೂಲ್ಮಾಡುವದು ಉದ್ಯೋಗಸ್ಥರ ಮನೆಬಾಡಿಗೆಗಳ ರಿಯಾಯಿತಿಯನ್ನು ಕಮ್ಮಿ ಮಾಡುವದು ಇವೇ ಮೊದಲಾದ ಹಂಚಿಕೆಗಳನ್ನು ಮಾಡಬೇಕೆಂದು ಪ್ರಕಟವಾಗಿದೆ.

ಅಲ್ಲದೆ ಮೇಲ್ಕಂಡ ಖೋತೆಯನ್ನು ಮಾಡುವಾಗ 1931 ನೇ ಇಸವಿಯ ಸಿಬ್ಬಂದಿಖೋತೆಯ' ರಿಯಾಯಿತಿಗಳನ್ನು ಕೊಡಲಾಗುವದೆಂದೂ ಪ್ರಕಟವಾಗಿದೆ.

ಯುದ್ಧ ದೂರವಾಯಿತೆ?

ತಿಂಗಳ ಹಿಂದೆ ಜಗತ್ತಿನ ಆದ್ಯಂತದಲ್ಲೆಲ್ಲಾ ಯುದ್ಧಾ, ಯುದ್ಧವೆಂಬ ಘೋಷಣೆಯು ತುಂಬಿತ್ತು, ಆದರೆ ಈಗ ಅದು ಶಾಂತತೆಯನ್ನು ತಳೆದಿದೆ. ಇಷ್ಟರಿಂದ ಯುದ್ಧವು ದೂರಾಯಿತೇ? ಖಂಡಿತಾ ಇಲ್ಲ. ಜರ್ಮನಿಯು ಸನ್ನಾಹತುಗಳನ್ನು ಕೇಳುತ್ತಿದೆ. ಎಲ್ಲಾ ರಾಷ್ಟ್ರಗಳು ಸೈನ್ಯ ಸಂಗ್ರಹಗಳನ್ನು ಸಿದ್ಧಗೊಳಿಸುತ್ತಿವೆ. ಹೊರಗೆ ಶಾಂತಿ, ಶಾಂತಿ, ಎಂದು ಬಾಯಲ್ಲಿ ಪಠನೆ ಮಾಡುತ್ತಾ ಮನದೊಳಗೆ ಯುದ್ಧದ ತೃಷೆಯಿಂದ ರಾಷ್ಟ್ರಗಳು ಕುದಿಯುತ್ತಿವೆ

ಬ್ರಿಟನವು ಹೊರಗೆ ಶಾಂತಿ ಪ್ರಚಾರ ಮಾಡುತ್ತಾ ಒಳಗೊಳಗೆ ಸೈನ್ಯಸನ್ನಾಹ ಮಾಡುತ್ತಿದೆ. ಅದು ಈಗ ಯುದ್ಧಕ್ಕೆ ತಯಾರಿಲ್ಲವೆಂಬುದು ನಿಜ. ಇಂದು ಅದು ತನ್ನ ಪ್ರಗತಿ ಮಾರ್ಗದಲ್ಲಿ ಉಚ್ಚ ಚಿಂತಸ್ತಿಗೆ ಏರಿದ್ದರೂ ಅದು ಯಾವ ಯುದ್ಧಕ್ಕೂ ಮುಂದಳಿಯದೆ ತಾಟಸ್ಥ್ಯಭಾವನೆಯನ್ನು ತಳೆದಿರುವದರ ಗೂಡಾರ್ಥವೇನು? ಈಗ ಬ್ರಿಟನು ಯುದ್ಧಕ್ಕೆ ಕೈಯಿಕ್ಕುವದರಿಂದ ಲಾಭವಿಲ್ಲ. ಯುದ್ಧರಂಗಕ್ಕೆ ಧುಮುಕಿದರೆ ತನ್ನ ಹತೋಟಿಯಲ್ಲಿರುವ ಪ್ರಾಂತಗಳನ್ನೆ ಬಿಡಬೇಕಾಗಿ ಬರುವದೆಂಬುದು ಬ್ರಿಟನರಿಗೆ ತಿಳಿಯದ್ದಲ್ಲ. ಆದ್ದರಿಂದಲೇ ಸಾಧಾರಣವಾಗಿ 18 ನೇ ಶತಮಾನದಿಂದಲೂ ಬ್ರಿಟಿಷರ ಘೋರಣೆಯು ಯೂರೋಪದಲ್ಲಿ ಯಾರೂ ತನಗಿಂತ ಮಿಕ್ಕುವ ಸ್ಥಾನಕ್ಕೆ ಹತ್ತಬಾರದೆಂದಾಗಿಸೆ. ಇದೇ ಉದ್ದೇಶದಿಂದ ನೆಪೋಲಿಯನನ್ನು ಮುರಿಯುವಾಗಲೂ, ಜರ್ಮನಿ ರಷ್ಯಗಳ ಕೆನ್ನೆ ಜಿವ್ವುವಾಗಲೂ ಬ್ರಿಟನು ಮುಂದಾಳುತನವನ್ನು ವಹಿಸಿತ್ತು. ಆದರೆ ಈಗ ಜರ್ಮನರ ಹೊಟ್ಟೆಯುಬ್ಬರಿಸಿ ಬರುತ್ತಿರುವಾಗ ಅದನ್ನು ತಡೆಗಟ್ಟಲು ಬ್ರಿಟನಿಗೆ ಸುಲಭ ಸಾಧ್ಯವಲ್ಲ. ಆದ್ದರಿಂದಲೇ ಯುದ್ಧಕ್ಕೆ ಮುಂದಾಗದೆ ಅವರ ಕೇಳಿಕೆಗಳನ್ನು ಸಲಿಸಿ ತನ್ನ ಸ್ಥಾನವನ್ನು ಕಾಯ್ದುಕೊಳ್ಳುವ ಯುಕ್ತಿಯನ್ನು ಹಿಡಿದಿದ್ದೆ.

ಅಮೇರಿಕವಾದರೂ ತನ್ನ ಸೈನ್ಯ ಸಂಗ್ರಹಗಳಲ್ಲೇ ತಲ್ಲೀನವಾಗಿದ್ದು ಒಮ್ಮೊಮ್ಮೆ ಶರತ್ಕಾಲದ ಮಿಂಚು ಗುಡುಗಿನಂತೆ ಬೆಳಕು ಮಿಂಚುಗಳನ್ನು ತೋರಿ ತೆಪ್ಪಗಿದೆ. ಜರ್ಮನರು ಎಹೂದ್ಯರ ಮೇಲೆ ನಡೆಸುತ್ತಿರುವ ಅತ್ಯಾಚಾರಗಳನ್ನು ಕೇಳಿ ರೇಗಿದ್ದರೂ ತಮಗೆ ದೂರವಿರುವ ಯೂರೋಪಿನೊಡನೆ ಜಗಳವೇಕೆ ಎಂದು ಸುಮ್ಮಗಿದೆ.

ಜರ್ಮನಿ ರಷ್ಯದ ದೃಷ್ಟಿಯು ಒಂದಕ್ಕೊಂದು ವಕ್ರವಾಗಿಯೇ ಇದೆ. ಎರಡು ರಾಷ್ಟ್ರಗಳೂ ತಮ್ಮ ತಮ್ಮ ಸೈನ್ಯ ಸಾಮಗ್ರಿಗಳನ್ನು ಹೊಗಳಿಕೊಂಡು ತೊಡೆ ಚಪ್ಪರಿಸುತ್ತಿವೆ. ಈ ಎರಡು ಜಟ್ಟಿಗಳು ತಮ್ಮ ತಮ್ಮೆ ಪೌರುಷವನ್ನು ಹೊಗಲುತ್ತಿರಲು ಜರ್ಮನರ ಬೆನ್ನುತಟ್ಟಿ ಹೇಗೆಂದರೂ ಜರ್ಮನರ ದೃಷ್ಟಿಯನ್ನು ಬದಲಾಯಿಸಿ ಶಾಂತಿಸ್ಥಾಪನೆ ಮಾಡಬೇಕೆಂಬುದು ಬ್ರಿಟಿಷರ ಪ್ರಯತ್ನ. ಅಂತು ಇಂದು ಬ್ರಿಟಿಷರು ಮುಳ್ಳಿನಿಂದಲೇ ಮುಳ್ಳನ್ನು ಕೀಳುವ ಈ ಹೊಸ ಉಪಾಯವನ್ನು ಹುಡುಕಿರುವರು. ಆದರೆ ಕಾಲ ಚಕ್ರದ ಉರುಳಾಟವಲ್ಲಿ ಪರಿಣಾಮವೇನಾಗುವದೆಂದು ಬಲ್ಲವರಾರು? ಸಮಗ್ರ ರಾಷ್ಟ್ರಗಳೂ ಶಕ್ತಿಮೀರಿ ಸೈನ್ಯ ಸನ್ನಾಹಕ್ಕೆ ತೊಡಗಿರುವಾಗ ಅವುಗಳ ಉಪಯೋಗವು ಒಂದಲ್ಲ ಒಂದು ದಿನ ಬಂದೇ ಬರಬೇಡವೇ? ಖಂಡಿತವಾಗಿಯೂ ಯುದ್ಧವು ಅನಿವಾರ್ಯ ಶಾಂತಿ ಸಂಸ್ಥಾಪನಾಚಾರ್ಯರ ಪೌರೋಹಿತ್ಯದಿಂದ ಕೆಲವೊಂದು ದಿನವನ್ನು ಮಾತ್ರ ನೂಕಲುಸಾಧ್ಯ.

—೦೦—

ಮಹಾತ್ಮರಿಗೆ ಪತ್ರಗಳ ಸುರಿಮಳೆ.

ಮಹಾತ್ಮ ಗಾಂಧಿಯವರು, ನಿತ್ಯವೂ ತಮಗೆ ಬರತಕ್ಕ ಪತ್ರವ್ಯವಹಾರಗಳನ್ನು ಸಂಪೂರ್ಣವಾಗಿ ಪರಿಶೀಲಿಸಲು ಅಸಮರ್ಥರಾಗಿದ್ದರೆ ಇಷ್ಟು ಕಾಗದಗಳು ಅವರಿಗೆ, ಬರಬಾರದೆಂದರೂ, ನಿತ್ಯವೂ ಅವು ಬರುತ್ತಿವೆ. ಮಹಾತ್ಮರು, ಈ ವಿಷಯವೆಲ್ಲಿ ಎಷ್ಟೋ ಸಲ ಜನತೆಯನ್ನು ಎಚ್ಚರಿಸಿದರೂ, ಜನಗಳು ಮಾತ್ರ ತಮ್ಮ ದೂರನ್ನು ಪತ್ರಮೂಲಕವಾಗಿ ಮಹಾತ್ಮರಿಗೆ ತಿಳಿಸುವುದನ್ನು ಇನ್ನೂ ಬಿಟ್ಟಿಲ್ಲ. ಇದರಿಂದ ಮಹಾತ್ಮಜಿಯವರು ಬಹಳವಾಗಿ ನೊಂದುಕೊಂಡಿದ್ದಾರೆ.

—೦೦—

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೆ ತಿಳಿಸುವುದೇನೆಂದರೆ–

ಪೊನ್ನಂಪೇಟೆ ನಾಡು ಕಿರುಗೂರು ಗ್ರಾಮದ ಪೌತಿ ಪದಾರ್ಥಿ ಕೃಷ್ಣಯ್ಯನವರು ಅನೇಕ ಲೇವಾದೇವಿ ಮಾಡುತ್ತಾ ಸದರಿಯವರಿಗೆ ಲಿಖಾವಟ್ಟುಗಳ ಮೇಲೂ ಡಿಕ್ರಿಗಳ ಮೇಲೂ ಹೊರಗಿನಿಂದ ಅಕ್ಕ್ರಯ ಬರಬಕ್ಕದಿದೆ. ಇವರು ಪೌತಾಗುವ ಮುಂಚೆ ತಾ. 17–2–1936ರ ರಿಜಿಸ್ಟ್ರಿ ವಿತಾನಾಮೆ ಪ್ರಕಾರ ಅವರ ಬಾಬು ಸಮಸ್ತ ಸ್ಥಿರ ಚರ ಸೊತ್ತುಗಳು, ಲೇವಾದೇವಿಗಳು ವಗೈರೆ ಅವರ ಹೆಂಡತಿಯಾದ ನನಗೂ, ನನ್ನ ಮರುದಿನಕ್ಕೆ ಅವರ ಮಗ ಪೊನ್ನಯ್ಯನಿಗೂ ಸಹ ಹಕ್ಕಾಗಿರತಕ್ಕಂದೆ ಬದಾಗಿ ವಿತಾ ಬರೆದು ರಿಜಿಸ್ಟ್ರಿ ಮಾಡಿರುತ್ತಾರೆ. ಈ ಹಕ್ಕಿನ ಪ್ರಕಾರ ನಾನು ಮುಂದರಿಸುತ್ತಿದ್ದೇನೆ. ಹೀಗಿರುವುದರಿಂದ ನನ್ನ ಗಂಡನ ಬಾಕಿದಾರರು ಅವರಿಂದ ಸಲ್ಲತಕ್ಕ ಬಾಕಿಯನ್ನು ನನಗಲ್ಲದೆ ಇತರ ಯಾರಿಗೂ ಸಲ್ಕೆ ಕೊಡಕೂಡದು. ಹಾಗೆ ಕೊಟ್ಟಲ್ಲು ನ್ಯಾಯವಾದ ಹಕ್ಕುದಾರಳಾದ ನನಗೆ ಬಾಧಿಸುವುದಿಲ್ಲ. ನ್ಯಾಯವಾದ ಹಕ್ಕುದಾರಳಾದ ನನಗೇನೇ ಸಲ್ಕೆ ಕೊಟ್ಟು ರಸೀತಿ ಪಡೆಯತಕ್ಕದ್ದು ಎಂಬದಾಗಿ ಸೂಚಿಸೋಣಾಗಿರುತ್ತೆ.

ಕಿರುಗೂರು,
16–11–38. } ಪದಾರ್ಥಿ ದೇವಮ್ಮ.

ಪುತ್ರಿ ಹಬ್ಬದ ಮೂಹೂರ್ತ ಪಟ್ಟಿ.

ಇದೇ ಸಂವತ್ಸರದ ವೃಶ್ಚಿಕ ಮಾಸ 20ನೇ ತೇದಿ ಅಂದರೆ ಡಿಶಂಬರ್ ತಾರೀಕು 6ನೇ ಸೋಂಗಳವಾರ ದಿನ ಕೃತಿಕ ನಕ್ಷತ್ರದಲ್ಲು ದೇವರ ಕಲಾಡಿಚೆ ಹಬ್ಬವೂ, ಅದೇ ದಿನ ಸಾಯಂಕಾಲ ರೋಹಿಣಿ ನಕ್ಷತ್ರ ಸಿಂಹ ಲಗ್ನದಲ್ಲು ದೇವ ಪೊಳುದು, ಅಧೇ ದಿನ ರಾತ್ರಿ 10 ಗಂಟೆಗೆ ನೆರೆ ಕಟ್ಟುವುದು, 11 ಗಂಟೆಗೆ ಕದಿರು ತೆಗೆಯುವುದು, 12 ಗಂಟೆಗೆ ಊಟ ಮಾಡುವುದಕ್ಕೆ ಶುಭ ಮೂಹೂರ್ತ.

ಮೂರನೆ ದಿನ ಅಂದರೆ ಡಿಶಂಬರ್ ತಾ. 7ನೇ ಬುಧವಾರ ಅಂದರೆ ವೃಶ್ಚಿಕ ಮಾಸ 21ನೇ ತೇದಿ ಮೃಗೇಶ್ವರ ನಕ್ಷತ್ರದಲ್ಲು ನಾಡುಪೊಳುದು. ಆ ದಿನ ರಾತ್ರಿ ಕರ್ಕಾಟಕ ಲಗ್ನದಲ್ಲು ರಾತ್ರಿ 8 ಗಂಟೆಗೆ ನೆರೆ ಕಟ್ಟುವುದು. 9 ಗಂಟೆಗೆ ಕದಿರು ತೆಗೆಯುವುದು, 10 ಗಂಟೆಗೆ ಊಟ ಮಾಡುವುದಕ್ಕೆ ಶುಭ ಮೂಹೂರ್ತ.

—೦೦—

COORG FOREST DEPARTMENT.

SALE NOTICE.

Mercara, the 16th November, 1938.

Tenders are invited for clear felling & removing jungle-wood and branch pieces etc, over 141 acres of Nagarhole, Kalhalla & Kolengeire coupes in Nagerhole Range. Each Tender should be accompanied by an earnest money deposit of Rs. 200 in currency notes and reach the Divisional Forest Officer South Coorg on or before 12 noon of 30–11–1938.

For further particulars please apply to the Divisional Forest Officer, South Coorg Mercara.

ಪ್ರಕಟಣೆ.

ಪಬ್ಲಿಕ್ ಮಹಾಶಯರೇ,

'ಅಖಿಲ ಕೊಡಗು ಉಪಾಧ್ಯಾಯರ' ಸಮ್ಮೇಳನದ ಆಶ್ರಯದಲ್ಲಿ ಈ ವರ್ಷ ನಾಪೋಕ್ಲು ಶಾಲಾ ಮೈದಾನದಲ್ಲಿ ಸ್ಪರ್ಧಿಗಳು ಇದೇ ಡಿಶಂಬರ್ ತಾ. 4ನೇ ಆದಿತ್ಯವಾರ ದಿನ ಬೆಳಿಗ್ಗೆ 8 ಗಂಟೆಯಿಂದ 12 ಗಂಟೆವರೆಗೆ ಈ ಕೆಳಗಿನ ಆಟೋಟಗಳಲ್ಲಿ ಭಾಗ ವಹಿಸುವಂತೆ ಈ ಮೂಲಕ ತಿಳಿಸಲ್ಪಟ್ಟಿದೆ.

(1) ಕ್ರಿಕೆಟ್ ಚೆಂಡು ಎಸೆಯುವುದು.
(2) ಭಾರದ ಕಲ್ಲು ಎಸೆಯುವುದು.
(3) 100 ಗಜ ಓಟ.
(4) ತೆಂಗಿನಕಾಯಿ ಗುರಿಹೊಡೆಯುವುದು.
(5) ಒಂದು ಮೈಲು ಓಟ.
(6) ಎತ್ತರ ಹಾರುವುದು.
(7) ದೂರ ಹಾರುವುದು.

ಚೌರಿರ ಮಂದಪ್ಪ,
ಕ್ಯಾಪ್ಟನ್,
ಆ. ಕೊ. ಉ. ಸ.

ಈಗ್ಯೆ ಸಮೂರು 400 ವರ್ಷಗಳ ಹಿಂದೆ ನಮ್ಮ ದೇಶವು ಪಾಳೆಯಗಾರರ ಹಾವಳಿಯಿಂದ ನರಳುತ್ತಿರಲು ಒಬ್ಬ ಸನ್ಯಾಸಿಯು ಈ ಪಾಳಯಗಾರರನ್ನೆಲ್ಲಾ ಸಾಗಬಡಿದು ಅವರ ಹಾವಳಿಯನ್ನು ಅಡಗಿಸಿ 'ನಿಮ್ಮ ದೇಶವನ್ನು ನೀವೇ ಆಳಿಕೊಳ್ಳಿ' ಎಂದು ಹೇಳಲು 'ಅದಾಗದು, ನಿವೇ ಆಳಿ' ಎಂದದ್ದರಿಂದ ಸನ್ಯಾಸಿಯು ತನ್ನ ಕೌಪೀನವನ್ನು ಬಿಸುಟು ರಾಜ್ಯದ ಸಿಂಹಾಸನವನ್ನು ಏರಿದನು. ತದನಂತರ ಸುಮೂರು 300 ವರ್ಷಗಳ ವರೆಗೆ ಆವನ ಸಂತತಿಯವರಿಂದ ದೇಶವು ಪಟ್ಟ ಕಷ್ಟಗಳನ್ನು ಇಲ್ಲಿ ವಿವರಿಸಬೇಕಾದ ಅವಶ್ಯವಿಲ್ಲ. ಆದರೆ 'ಒಳ್ಳೆ ಸಂಬಿಗಸ್ಥರಾದ ಚಾವುಡಿಕಾರ'ರೆಂಬ ಬಿರುದನ್ನು ಪಡೆಯಿತು.

ಕಡೆ ಕಡೆಯ ಈ ಸನ್ಯಾಸಿಯ ಸಂತತಿಯ ಅರಸರ ಕ್ರೂರತನವು ಮಿತಿಮೀರಲು ಈಗ್ಯೆ ಸುಮೂರು 100 ವರ್ಷಗಳ ಹಿಂದೆ ಸುತ್ತು ಮುತ್ತು ರಾಜ್ಯಭಾರ ಮಾಡುತ್ತಿದ್ದ ಕಂಪನಿ ಸರ್ಕಾರವು ದೇಶದ ಸಹಾಯಕ್ಕೆ ಬಂದು ರಾಜನನ್ನು ಸದೆಬಡೆದು 'ನಿಮ್ಮ ದೇಶವನ್ನು ಯಾರು ಆಳಬೇಕು' ಎಂದಾಗ ಸಭೆಯಲ್ಲಿ ಸೇರಿದ್ದ ದಿವಾನರೂ, ತಕ್ಕರೂ, ಇತರ ದೊಡ್ಡ ಮನುಷ್ಯರೂ 'ನೀವೇ ಆಳಬೇಕೆ'ಂದರು. ಈ ಒಂದು ಮಾತಿನಿಂದ ದೇಶವು 100 ವರ್ಷಗಳ ವರೆಗೆ ಆ ಕಂಪನಿ ಸರ್ಕಾರದ ಹಾಗೂ ಬ್ರಿಟಿಷ್ ಸರ್ಕಾರದ ಆಡಳಿತಕ್ಕೆ ತಲೆಬಾಗಿ ಸ್ವತಂತ್ರದ ಬಾಳುಮೆಯನ್ನೇ ಮರೆತು ತಾವು ಎಂದೆಂದಿಗೂ ಆಳಿಸಿಕೊಳ್ಳುವವರೇ ಎಂಬ ಮನೋಭಾವನೆಯು ವಿದ್ಯಾವಂತರಲ್ಲೂ ಕೂಡ ಆವರ ರಕ್ತನಾಡಿಗಳಲ್ಲಿ ತುಂಬಿ ತನ್ನಿಷ್ಟಕ್ಕೆ ತಾನೇ ಬೆನ್ನಿನ ನರವು ಕುಗ್ಗುವಂತಾಗಿ 'ರಾಜ ಭಕ್ತ'ರೆಂಬ ಬಿರುದನ್ನು ಪಡೆದು ದೇಶವ ಉತ್ಪತ್ತಿಯಿಂದ ದೇಶದ ಆಡಳಿತವನ್ನು ನಡಿಸಲಾರದಂತ ತಾಪತ್ರೆಗೆ ಈಡಾಯಿತು.

ಬರ ಬರುತ್ತಾ ಕಡೇ ಸಾರಿಗೆ 'ನಿಮ್ಮ ದೇಶವನ್ನು ನೀವೇ ಆಳಿಕೊಳ್ಳಿ' ಎಂದು ಹೇಳುವ ಸಂಭವವು ಅಂದರೆ ಅರ್ಥಾತ್ ದೇಶದ ಆಡಳಿತದ ಜವಾಬುದಾರಿಯು ದೇಶದವರ ಕೈಸೇರುವ ಸಂಭವ ಬರುವಂಥಾ ಈ ಸಮಯದಲ್ಲಿ ದೇಶವು ಗಲಿಬಿಲಿಯಾಗತೊಡಗಿ ಮುಖ್ಯವಾಗಿ ವಿದ್ಯಾವಂತರಲ್ಲಿ, ಅನುಭವ ಶಾಲಿಗಳೆಂದು ಹೇಳಿಕೊಳ್ಳುವವರಲ್ಲಿ ಗಡಿಬಿಡಿಯು ವಿಪರೀತವಾಗಿ ಮದ್ರಾಸಿನವರನ್ನೂ, ಮೈಸೂರಿನವರನ್ನೂ ದೇಶವನ್ನು ಆಳಲು ಆಂಗಾಲಾಚಿ ಬೇಡತೊಡಗಿದ್ದು ನೋಡಿದರೆ ಬಹಳ ಆಶ್ಚರ್ಯ ಉಂಟಾಗಿದೆ. ಮದ್ರಾಸಿಗೆ ಸೇರಿ ಬಹುಶ್ಯ 'ಕೊಂಬುಂಬಾಲಂ ಇಲ್ಲತಾ ಪಶುಂಗಳ್' ಎಂಬ ಬಿರುದನ್ನು ಪಡೆಯಲಿಂದೇ ಕಾಣುತ್ತದೆ. ಇದೇನು ಸ್ವತಂತ್ರವಾಗಿ ಬಾಳಲು ನಮ್ಮ ಹಣೆಯಲ್ಲಿ ಬರೆಯಲಿಲ್ಲವೋ ಏನೋ?

ಈಗ ಕೆಲವು ದಿನಗಳ ಹಿಂದೆ ದೇಶದ ಆಗು ಹೋಗುಗಳನ್ನು ತೀರ್ಮಾನಿಸಲು ಮಡಿಕೇರಿಯಲ್ಲಿ ಹತ್ತು ಜನರು ಕಾಗದ ಬರೆದು ತಾವು ಕೂತಲ್ಲಿಗೆ ಹಲವರನ್ನು ಕರಿಸಿಕೊಂಡು ಸಭೆ ಸೇರಿಸಿ ಸಭೆಯಲ್ಲಿ ಮಾತಾಡಲು 5–10 ನಿಮಿಷಗಳ ಸಮಯವನ್ನು ಕೊಟ್ಟುಕೊಂಡು ದೇಶದ ಆಡಳಿತವನ್ನು ಮದ್ರಾಸಿನೊಂದಿಗೆ ಸೇರಿಸಬೇಕೆಂಬುದಾಗಿ ತೀರ್ಮಾನಿಸಿದರಂತೆ. ಈ ಮಿಟಿಂಗಿಗೆ ಕೌನ್ಸಿಲ್ ಮೆಂಬರುಗಳೂ, ಡಿ. ಬೋರ್ಡು ಮೆಂಬರುಗಳೂ, ಮುನ್ಸಿಪಾಲಿಟಿ ಮೆಂಬರುಗಳೂ, ನೋಟಿಫೈಡ್ ಏರ್ಯದ ಮೆಂಬರುಗಳೂ, ರಿಟಯರ್ಡ್ ಉದ್ಯೋಗಸ್ಥರೂ ಮತ್ತು ಲಾಯರುಗಳೂ ಹಾಜರಿದ್ದರೆಂದು ಪತ್ರಿಕೆಯಲ್ಲಿ ಸಭೆಯ ಅಧ್ಯಕ್ಷರಾಗಿದ್ದ ಮೆ. ಕೆ. ಸುಬ್ಬಯ್ಯನವರ ಹೆಸರಿನಲ್ಲಿ ಪ್ರಕಟಿಸಲಾಗಿತ್ತು.

ಮಹಾನೀಯರೇ, ಈ ವಿಷಯವಾಗಿ ನಾವು ಆಲೋಚಿಸತಕ್ಕ ಅನೇಕ ಸಂಗತಿಗಳಿವೆ. (1) ಮಡಿಕೇರಿಯಲ್ಲಿ ಮಾತ್ರ ಒಂದು ಮಿಟಿಂಗು ಮಾಡಿದರೆ ಅದು ದೇಶದವರ ಅಭಿಪ್ರಾಯವಾಯಿತೋ? ಇವರೇಕೆ ಇತ್ತೀಚೆಗಾದರೂ ದೇಶದಲ್ಲೆಲ್ಲಾ ಮಿಟಿಂಗು ನಡೆಸಿ ಜನರ ಅಭಿಪ್ರಾಯವನ್ನು ಪಡೆಯಲಿಲ್ಲ? (2) ಮಾತಾಡುವವರಿಗೆ 5–10 ನಿಮಿಷಗಳ ಸಮಯ ಮಾತ್ರ ಕೊಟ್ಟರಂತೆ! ಇದು ಏನು 5–10 ನಿಮಿಷಗಳಲ್ಲಿ ದೇಶದ ಭವಿಷ್ಯವನ್ನು ತೀರಿಸುವಷ್ಟು ಸುಲಭವೋ? ಬಹುಶ್ಯ ಆ ಮಿಟಿಂಗಿಗೆ ಚುನಾಯಿತ ಮೆಂಬರುಗಳೇ ಹೆಚ್ಚಾಗಿದ್ದರಿಂದ ಇವರು ಜನರಿಂದ ಓಟು ಕೇಳಲು ಬಂದಾಗ 5–10 ನಿಮಿಷಗಳ ಸಮಯವನ್ನು ಮಾತಾಡಲಿಕ್ಕೆ ಕೊಡುತ್ತಿದ್ದುದರ ಅಭ್ಯಾಸವೋ? ಅಲ್ಲ ಹೊರಗಿನಿಂದ ಬಂದ ಈ ಮೆಂಬರುಗಳಿಗೂ, ಇತರರಿಗೂ ಬಸ್ಸಿನ ಸಮಯಕ್ಕೆ ಸರಿಯಾಗಿ ವಾಪಸು ಆವರವರ ಮನೆಗೆ ಹೋಗುವ ಮತ್ತು ಹತ್ತಿರದವರಿಗೆ 4 ಗಂಟೆಯ ಸಮಯಕ್ಕೆ ಟೀ ಕುಡಿಯಲು ಮನೆಗೆ ಸೇರಲೋ ಎಂದು ಸಂಶಯಪಡಬೇಕಾಗಿದೆ. ಅದಲ್ಲದಿದ್ದರೆ ದೇಶದ ಮುಂದಿನ ಭವಿಷ್ಯವನ್ನು ಚರ್ಚಿಸುವಾಗ ನಿಮಿಷ ಗಂಟೆಗಳ ಕಾಲಮಿತಿ ಇಡುತ್ತಲೇ ಇರಲಿಲ್ಲ. (3) ಈ ಚುನಾಯಿತ ಮೆಂಬರುಗಳ ಹಾಜರಾತಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲು ಕಾರಣವೇನು? ಬಹುಶ ಆ ದಿನದ ಮಿಟಿಂಗನ್ನು ಸೇರಿಸಿದವರು ಕೊಡಗನ್ನು ಬೇರೆ ಪ್ರಾಂತದೊಂಧಿಗೆ ಸೇರಿಸಿಬಿಡಬೇಕೆಂದು ಮಿಟಿಂಗಿಗೆ ಮೊದಲೇ ತೀರ್ಮಾನಿಸಿಕೊಂಡಿರಬೇಕು. ಅವರ ಆ ಇರ್ಧಾರಿಕೆ ಬಲಕೊಡುವುದಕ್ಕೆ ಈ ಮೆಂಬರುಗಳ ಹಾಜರಾತಿಯನ್ನು ಪ್ರಕಟಿಸಿರಬೇಕು. ಈ ಮೆಂಬರುಗಳು ದೇಶದ ಭವಿಷ್ಯತ್ತನ್ನು ತೀರ್ಮಾನಿಸಲು ದೇಶದವರ ಪ್ರತಿನಿಧಿಗಳಾಗಿ ಬಂದವರಲ್ಲ. ಇವರ ತೀರ್ಮಾನವು ದೇಶದವರ ತೀರ್ಮಾನ ಖಂಡಿತವಾಗಿಯೂ ಅಲ್ಲ. ಹಿಂದೆ ಎರಡಾವೃತ್ತಿ, ತಕ್ಕರೂ, ದಿವಾನರೂ, ದೊಡ್ಡ ಮನುಷ್ಯರೂ 'ನೀವೇ ಆಳಿ' ಎಂದು ಹೇಳಿದುದರ ಪರಿಣಾಮವನ್ನು ದೇಶವು ಚೆನ್ನಾಗಿ ತಿಳಿದಿದೆ. ಇದು 20 ನೇ ಶತಮಾನವೆಂಬುದು ತಿಳಿದರಲಿ. ಇರಲಿ, ಈ ಮೇಲ್ಕಂಡ ಚುನಾಯಿತ ಮೆಂಬರುಗಳೂ, ಲಾಯರುಗಳೂ, ರಿಟಯರ್ಡ್ ಆಫೀಸರೂಗಳೂ ಸೇರಿದ ಇಂಥಾ ಘನ ಸಭೆಯಲ್ಲೇ ತನ್ನು ದೇಶವನ್ನು ತಾವೇ ಆಳುತ್ತೇವೆಂಬ, ಸ್ವತಂತ್ರವಾಗಿ ಬಾಳುತ್ತೇವೆಂಬ, ಇರಾದೆ, ಧೈರ್ಯ ಭಾರದ್ದರಿಂದ ಈ ಚುನಾಯಿತರಿಂದ ದೇಶಕ್ಕಾಗಲಿ ಕಲ್ಯಾಣವೇನೆಂಬದನ್ನು ಇದ್ದರಿಂದಲೇ ನಿರ್ಧರಿಸಬಹುದಾಗಿದೆ. ಈ ತೀರ್ಮಾನದ ಸಂಗತಿ ಕೇಳುವಾಗ ಈಗ ಕೆಲವು ದಿನಗಳ ಹಿಂದೆ ಸರ್ ಸಿಕಂದರ್ ಹಯಾತ್ ಖಾನರವರು ತಮ್ಮ ಭಾಷಣ ಒಂದರಲ್ಲಿ ಇಂಡಿಯಾದವರಲ್ಲಿರುವ ಸೈನಿಕರಲ್ಲಿ ಶೇಕಡ 71 ರಷ್ಟು ಪಂಜಾಬಿನವರೇ ಇದ್ದಾರೆ. 'ಭಲಾ' ಎಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡದ್ದು ನೆನಪಾಗುತ್ತದೆ. ಶೇಕಡ 71 ರಷ್ಟು ಸೈನಿಕರನ್ನು ಕೊಟ್ಟ ತನ್ನ ಧೀರ, ರಾಜಭಕ್ತ, ಆಧಿಪತ್ಯಕ್ಕೆ ಯಾಕೆ ಸಂಪೂರ್ಣ ಸ್ವರಾಜ್ಯ ಕೊಡಲಿಲ್ಲ? ಯಾಕೆ ಕೊಡಬಾರದು? ಎಂದು ಕೇಳಲು ಮರೆತರೋ, ಅಲ್ಲ ಎದೆಗಾರಿಕೆ ಇಲ್ಲದಾಯಿತೇ? ಅಲ್ಲ ಇನ್ನಾವದಾದರೂ ಗೂಢವಾದ ಸಂಗತಿ ಅಡ್ಡ ಬಂತೋ ಹೇಗೂ ಇರಲಿ ಇದು ದೊಡ್ಡವರ ಮಾತು. ನನಗದು ಬೇಡ.

(೧೦ ನೇ ಪುಟದ ೪ ನೇ ಕಲಂ ನೋಡಿ.)

ಕೊಡಗಿನ ತ್ರಿಕಾಲ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯೊಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಯೆ ವರ್ಷಾವಧಿ 2,21,959–6–0 ರೂ. ವಿಮೂ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿವ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮೂ ಕಂತಿನ ಆದಾಯವು ರೂ. 3,66,198–13–0, ಗತ ವರ್ಷದ್ದು 2,36,767–6–6 ಆಗಿದೆ.

ಜೀವ ವಿಮೂ ಫಂಡು:—ಈ ಕಂಪೆನಿಯ ಜೀವ ವಿಮೂ ಫಂಡು ರೂ. 75,258–14–9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037–8–4 ವಜಾ ಕಳೆದು ರೂ. 21,00,421–1–3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮೂ ಕಂತು.	ಜೀವ ವಿಮೂ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮೂ ಕಂಪೆನಿಗಳ ವಾರ್ಷಿಕ ವೃತ್ತಾಂತವಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮೂ ಕಂಪೆನಿಗಳ ಆಕ್ಟಿನ ಮೇರೆ ತೇವಣಾತಿ:—ಈ ಖಾನೂನು ಮೇರೆ ತೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,
(52–24) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಮಾನಪತ್ರ.

ಮಾನ್ಯ ಮಂತ್ರಿಗಳಾದ ಶ್ರೀ. ಯಾಕೂಬ್ ಹಸೆನರಿಗೆ,

ಕೊಡಗು ಜಿಲ್ಲಾ ಕಾಂಗ್ರೆಸ್ಸು ಕಮಿಟಿಯವರು ಅರ್ಪಿಸಿದ್ದು.

ಮದ್ರಾಸಿನ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳಾದ ಮಾನ್ಯ ಹಜರತ್ ಯಾಕೂಬ್ ಹಸೆನ್ ಸಾಹೇಬರಿಗೆ–

ಕೊಡಗು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರಾದ ನಾವು ತಮಗೆ ಹೃದಯಪೂರ್ವಕವಾದ ಸುಸ್ವಾಗತವನ್ನೀಯುತ್ತೇವೆ. ಮಹಾತ್ಮ ಗಾಂಧಿ, ಬಾಬು ರಾಜೇಂದ್ರ ಪ್ರಸಾದ್, ಸೆನ್‌ಗುಪ್ತರೇ ಮೊದಲಾದ ಅಖಂಡ ಮುಖಂಡರ ಸಮ್ಮಿಲನವು ನಮಗೆ ದೊರಕಿದ್ದರೂ ಸಹ ಇಂಡಿಯಾ ಸರ್ಕಾರದ ಅಧಿಕಾರ ವಹಿಸಿರುವ ನೌಕರರೊಬ್ಬರು ಈ ಪ್ರಾಂತಕ್ಕೆ ಚಿತ್ತೈಯಿಸಿದುದು ಇದೇ ಪ್ರಥಮ. ಅಲ್ಲದೆ ನಮ್ಮ ದೇಶದಲ್ಲಿ ತಾವು ಇರುವ ಕ್ಷಣಿಕ ಕಾಲದಲ್ಲಿ ತಮಗೆ ಶುಭವಾಗಲಿ ಮತ್ತು ನಮ್ಮ ದೇಶವನ್ನು ಎಂದೂ ನೆನಪಿನಲ್ಲಿಡುವಂತಾಗಲಿ ಎಂದು ಆಶಿಸುತ್ತೇವೆ.

ಖಿಲಾಫತ್ ಚಳವಳಿಯ ಸಮಯದಲ್ಲಿ ಮಲಬಾರಿನಲ್ಲಾದ ತಮ್ಮ ಬಂಧನದಿಂದ ಆದ ಅಮೋಘ ಸ್ಫೂರ್ತಿಯು ಇನ್ನೂ ಕೊಡಗಿನ ಜನತೆಯ ಚಿತ್ತದಲ್ಲಿ ಅಚ್ಚಳಿಯದೆ ನಿಂತಿದೆ. ಆ ಮೊದಲ್ಗೊಂಡು ರಾಷ್ಟ್ರೀಯ ಭಾವನೆಯು ಈ ತೆರೆಯು ನಮ್ಮ ಈ ಚಿಕ್ಕ ಪ್ರಾಂತದಲ್ಲಿ ಕ್ರಮೇಣ ಹೆಚ್ಚುತ್ತಾ ಬಂದಿದೆ. ಅಲ್ಲದೆ ಕಳೆದ ಸ್ವಾತಂತ್ರ್ಯದ ಹೋರಾಟದಲ್ಲಿ ಈ ಪ್ರಾಂತದ ಜನರು ತಮ್ಮ ಪಾಲಿನ ಕರ್ತವ್ಯವನ್ನು ಪೂರ್ತಿ ಸಲ್ಲಿಸಲು ಪ್ರೇರೇಪಿಸಿತು. ಭಾರತ ಮಾತೆಯ ಸ್ವಾತಂತ್ರ್ಯ ಮತ್ತು ಹಿಂದು ಮುಸ್ಲಿಮರ ಐಕ್ಯಕ್ಕಾಗಿ ತಾವು ಸಲಿಸಿದ ಅಮೋಘ ಸೇವೆಯು ನಮ್ಮ ಗೋಚರಕ್ಕೆ ಬಾರದೆ ಇಲ್ಲ.

ರಾಜಕೀಯ ಸುಧಾರಣೆಗಳಲ್ಲಿ ಈಗ ನಾವು ಹಿಂದೆ ಇದ್ದರೂ, ನಮ್ಮ ನೆರೆ ಹೊರೆಯ ಪ್ರಾಂತಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವುದು ನಮ್ಮ ಕಾಂಗ್ರೆಸ್ ಚಟುವಟಿಕೆಗಳಿಗೆ ಒಂದು ಹುರುಪು ಕೊಟ್ಟಂತಾಗಿದೆಯಲ್ಲದೆ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರೇರೇಪಿಸಿದೆ.

ಕೊಡಗಿನ ನಿಮ್ಮ ಈ ಸಂಚಾರದಿಂದ ಈ ಎರಡು ಪ್ರಾಂತಗಳಲ್ಲಿ ಲಾಭದಾಯಕ ಪರಿಣಾಮವನ್ನುಂಟುಮಾಡುವುದೆಂದು ನಂಬುತ್ತೇವೆ. ಅಲ್ಲದೆ ನಿಮ್ಮ ಪ್ರಾಂತ್ಯದ ಕಾಂಗ್ರೆಸ್ ಮಂತ್ರಿಗಳ ಆಗಾಗಿನ ಆಗಮನವು ಈ ಎರಡು ಪ್ರಾಂತಗಳ ಭಾಂಧವ್ಯವನ್ನು ಹೆಚ್ಚಿಸಲು ಸಹಕಾರಿಯಾಗಬಹುದೆಂದು ಆಶಿಸುತ್ತೇವೆ.

ನಮ್ಮ ಪ್ರಾಂತದಲ್ಲಿ ನಿಮ್ಮ ಪ್ರವಾಸವು ಆನಂದಧಾಯಕವಾಗಿರಲಿ ಎಂದು ಹಾರೈಸುತ್ತೇವೆ.

ತಮ್ಮ

ಸಹಪಾಠಿ ಕೆಲಸಗಾರರಾದ,

ಕೊಡಗು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ.

ಮಡಿಕೇರಿ, ತಾ. 21–11–'38.

ಪುನಹ ಒಂದಾವೃತ್ತಿ ನಿಮ್ಮ ಅಪೂರ್ವ ಸ್ವಾಗತಕ್ಕಾಗಿ ನಿಮ್ಮನ್ನು ಬಂಧಿಸುತ್ತೇನೆ. ಇಲ್ಲಿಯ ನನ್ನ ವಿಹಾರವ್ಯವಸ್ಥಿಯು ಕೊಂಚವೇ ಆಗಿರುವುದರಿಂದ ನಾನು ವ್ಯಸನಪಡುತ್ತೇನೆ. ನಿಮಗೆ ಶುಭಾಶಯವನ್ನು ಬಯಸಿ ನನ್ನ ಮಾತನ್ನು ಮುಗಿಸುವೆನು.

ಮಾನ್ಯ ಮಂತ್ರಿ ಶ್ರೀ. ಯಾಕುಬ್ ಹಸನ್‌ರವರ ಭಾಷಣ.

ಸ್ನೇಹಿತರೇ,

ಈ ಸಂದರ್ಭದಲ್ಲಿ ನೀವು ನನಗೆ ಕೊಟ್ಟ ಅಭೂತಪೂರ್ವ ಸ್ವಾಗತಕ್ಕೆ ನಾನು ಕೃತಜ್ಞನಿರುವೆನು. ದಕ್ಷಿಣದ ಈ ಪ್ರವಾಸವನ್ನು ಕೈಕೊಳ್ಳಬೇಕೆಂಬ ನನಗೆ ಪೂರ್ಣ ಮನಸಿದ್ದರೂ ಸಹ ಈ ವರೆಗೆ ಅದನ್ನು ಕೈಕೊಳ್ಳಲು ಸಾಧ್ಯವಾಗಲಿಲ್ಲ. ಕಾಂಗ್ರೆಸ್ ಛತ್ರಿಯಡಿಯಲ್ಲಿ ಅಧಿಕಾರ ಸ್ವೀಕಾರ ಮಾಡಿದನಂತರ ದಕ್ಷಿಣ ಭಾರತದ ಪ್ರವಾಸ ಕೈಕೊಂಡಾಗ ಕೊಡಗಿಗೆ ಬರಬೇಕೆಂದು ನಿಶ್ಚಯಿಸಿದೆ.

ಈ ಪ್ರಾಂತವು ಚಿಕ್ಕ ದೇಶವಾಗಿದೆ. ಚೀಫ್ ಕಮಿಷನರ ಪ್ರಾಂತಗಳಲ್ಲಿ ದೆಲ್ಲಿಯನಂತರ ಚಿಕ್ಕ ಪ್ರಾಂತವಿದು. ಚೀಫ್ ಕಮಿಷನರ ಅಧೀನದಲ್ಲಿರುವ ಪ್ರಾಂತಗಳಲ್ಲಿ ನ್ಯಾಯವಿಧಾಯಕ ಸಭೆಯನ್ನೊಳಗೊಂಡದ್ದು ಇದೊಂದೇ. 1560 ಚದರ ಮೈಲುಗಳಿಂದ 1,63,000 ಜನರಿಂದೊಡಗೂಡಿದ ಈ ಪ್ರಾಂತವು ತ್ರಿಚಿನಾಪಲ್ಲಿ ಟೌನಿಗಿಂತಲೂ ಚಿಕ್ಕದಿದೆ. ಇದರ ರಾಜಧಾನಿಯಾದ ಮಡಿಕೇರಿಯಲ್ಲಿ ಬರೇ 5 ಸಾವಿರ ಜನರಿರುವರು. ಇವನ್ನು ಮದ್ರಾಸಿನ ಹಳ್ಳಿಗೆ ಹೋಲಿಸಬಹುದು. ಸಣ್ಣದೊಂದು ಪ್ರಾಂತವಾದರಿಂದ ಇದರಿಂದ ಬಹಳ ಪ್ರಯೋಜನವಿದೆ. ಪೂರ್ವಕಾಲದಲ್ಲಿ ಸ್ವತಂತ್ರವಾದ ಚಿಕ್ಕ ಚಿಕ್ಕ ನಗರಗಳಿದ್ದವು. ಉದಾಹರಣೆಗೆ ಹ್ಯಾಂಬರ್ಗನ್ನು ಹೇಳಬಹುದು. ನಿಮ್ಮ ಈ ಚಿಕ್ಕ ಪ್ರಾಂತಕ್ಕೆ ಡಿ. ಬೋರ್ಡ್, ಮುನಿಸಿಪಾಲಿಟಿಗಳೂ ಇವೆಯೆಂದರೆ ಸೋಜಿಗದ ವಿಚಾರ. ದಕ್ಷಿಣ ಕನ್ನಡಕ್ಕೆ ಹೋಗುವ ಮೊದಲು ನಾನು ಮೈಸೂರಿನ ಜೋಗ್ ಮತ್ತು ಅಗುಂಬೆ ಜಲಪಾತಗಳನ್ನು ಸಂದರ್ಶಿಸಿದೆನು. ಮೈಸೂರಿನ ಕೆಲ ಭಾಗವೂ, ದಕ್ಷಿಣ ಕನ್ನಡದ ಪಶ್ಚಿಮ ಭಾಗವೂ, ಕೊಡಗೂ ಸಹ ಬೆಟ್ಟಪ್ರಾಂತಗಳಾಗಿವೆ. ಈ ಮೂರು ಪ್ರಾಂತಗಳ ಭಾಷೆಯೂ ಒಂದೇ ಇರುವದು. ದಕ್ಷಿಣಕನ್ನಡದೊಂದಿಗೆ ನಿಮಗೆ ಹೆಚ್ಚಿನ ಭಾಂಧವ್ಯವಿರುವದು. ಕೊಡಗಿನ ಭವಿತವ್ಯದ ವಿಚಾರ ನಿಮ್ಮ ಮುನೋವೃತ್ತಿ ಹೇಗಿದೆಯೆಂದು ನನಗರಿಯದು. ಮದ್ರಾಸಿನಲ್ಲಿ ನಾವಿರುವಂತೆ ಒಬ್ಬ ಮಂತ್ರಿಯನ್ನು 500 ರೂಪಾಯಿಯಲ್ಲಿ ನೇಮಕ ಮಾಡಿ ಕೊಡಗು ಪ್ರತ್ಯೇಕ ಇರಿಸಿದರೆ ಒಳ್ಳೇದು. ಈ ಚಿಕ್ಕ ಪ್ರಾಂತಕ್ಕೆ ಚೀಫ್ ಕಮಿಶನರ ಅಗತ್ಯವಿಲ್ಲ.

ಕೆಲವರಿಗೆ ಪೊಡ್ಡ ಪ್ರಾಂತಗಳಲ್ಲಿ ಒಂದು ಭಾಗವಾಗಿರಲು ಆಶೆ ಇರಬಹುದು. ಮದ್ರಾಸಿಗೆ ಈಗ ಸೇರಲು ನೀವು ಇಷ್ಟಪಡಲಿಕ್ಕಿಲ್ಲ. ಈ ಎಲ್ಲಾ ವಿಷಯಗಳನ್ನು ತೀರ್ಮಾನಿಸುವ ಅಧಿಕಾರ ನಿಮಗೇ ಉಳಿದಿದೆ.

ಕೊಡಗಿನಲ್ಲಿ ವಿದ್ಯಾ ಪ್ರಸಾರವು ಬೇರೆ ಭಾಗಗಳಿಗಿಂತ ಚೆನ್ನಾಗಿದೆಯೆಂದು ತಿಳಿಯಲು ಸಂತೋಷವೆನಿಸುತ್ತದೆ. ಆದರೆ ಇದರಿಂದಲೇ ತೃಪ್ತರಾಗುವದು ಯೋಗ್ಯವಲ್ಲ. ವಿದ್ಯಾ ಪ್ರಸಾರವು ಯಥೇಚ್ಛವಾಗಿ ನಡೆಯಬೇಕು.

ನಿಮ್ಮ ನ್ಯಾಯವಿಧಾಯಕ ಸಭೆಯು ಮಿಂಟೊ ಮಾರ್ಲೆ ಸುಧಾರಣೆಯದ್ದು. ನೀವು ಒಬ್ಬ ಮಂತ್ರಿಯಿಂದೊಡಗೂಡಿದ ಆಸೆಂಬ್ಲಿಯನ್ನು ಆಶಿಸುತ್ತೀರಿ. ಭಾರತದ ಅಮೋಘ ಚಳವಳಿಯಲ್ಲಿ ನೀವು ನಮ್ಮ ಪಾಲಿನ ಸೇವೆಯನ್ನು ಪಲ್ಲಿಸುತ್ತಿರುವಿರಿ. ನಿಮ್ಮ ಈ ಜಾಗ್ರತಿಯು ಗ್ರಾಮ ಗ್ರಾಮಗಳಲ್ಲಿ ಪಸರಿಸಿದೆಯೋ ಎಂಬದು ನನಗೆ ತಿಳಿದಿಲ್ಲ. ಮದ್ರಾಸಿನಲ್ಲಿ ನೀರಿನ ಸರಬರಾಯಿಯ ವಿಚಾರವು ನನ್ನ ಆಧೀನದಲ್ಲಿದೆ. ಅಲ್ಲಿಯ ಗ್ರಾಮಸ್ಥರು ಕಾಂಗ್ರೆಸ್ ಕೆಲಸಗಳಲ್ಲಿ ವಿಶ್ವಾಸ ಉಳ್ಳವರೂ ಆಸಕ್ತಿ ಇರುವವರೂ ಇರುವರು. ಅವರಿಗೆ ಮನದಟ್ಟಾಗುವ ವಿಚಾರಗಳೆಂದರೆ ಪಾನ ನಿರೋಧ ಮತ್ತು ವ್ಯವಸಾಯಗಾರರ ಸಾಲ ನಿವಾರ್ಣಣಾ ಮಸೂದೆ. ಆದ್ದರಿಂದ ಗ್ರಾಮ ಜನರ ಜಾಗ್ರತಿಯಾಗಬೇಕು. ಮುಖಂಡರು ತಮ್ಮ ಬಲವು ಗ್ರಾಮ ಜನರಿಂದ ಬಂದಿರುವದೆಂಬದನ್ನು ಮರೆಯಬಾರದು.

ನಿಮ್ಮ ಪ್ರಾಂತ್ಯವನ್ನು ಪ್ರತ್ಯೇಕ ಇಟ್ಟು ಬೇರೆ ಪ್ರಾಂತಗಳಿಗೆ ಒಂದು ಮೊದರಿಯೊಗುವಂತೆ ಮಾಡಬಹುದು. ನಿಮ್ಮ ಆರ್ಥಿಕ ಅಭಿಪ್ರಾಯವನ್ನು ಬಲಪಡಿಸುವ ಕಾರ್ಯಗಳನ್ನು ಕೈಕೊಳ್ಳಬೇಕು. ನಾನು ಇಲ್ಲಿ ನಿಮಗೆ ಬರೇ ಅತಿಥಿಯಾಗಿರುವೆನು. ನಿಮಗೆ ಸೌಲಭ್ಯಗಳನ್ನು ಒದಗಿಸಿಕೊಡುವೆನೆಂದು ನಾನು ಭರವಸೆ ಕೊಡಲಾಗುವುದಿಲ್ಲ. ಯಾಕೆಂದರೆ ಕೊಡಗು ನಮ್ಮ ವ್ಯವಹಾರ ಕ್ಷೇತ್ರದಲ್ಲಡಗುವುದಿಲ್ಲ. ಆದರೂ ನಿಮಗೆ ಆಗಾಗ್ಗೆ ಬೇಕಾದ ಸಹಾಯವನ್ನೀಯುವೆನೆಂದು ಭರವಸೆ ಕೊಡುತ್ತೇನೆ.

ಕೊಡಗಿನ ತ್ರಿಕಾಲ.

(೫ನೇ ಪುಟದಿಂದ ಸಾಗಿದ್ದು)

ಪಾಳೆಯಗಾರರಿಂದ ಸನ್ಯಾಸಿಗೆ, ಸನ್ಯಾಸಿಯಿಂದ ಕಂಪನಿ ಸರ್ಕಾರಕ್ಕೆ, ಇಲ್ಲಿಂದ ಮದ್ರಾಸಿಗೆ, ಅಲ್ಲಿಂದ ಬೇರೆ ನೆಲೆಗಳು ಅನುಕೂಲವಿದೆಯೋ ಎಂಬದನ್ನು ಮೊದಲಾಗಿ ವಿಚಾರಿಸಬೇಕಾಗಿದೆ. ಈಗಾಗಲೇ ಇಂತಿಷ್ಟೇದಿನಾಯೊ ತಿಂಗಳುಗಳಲ್ಲಿ ಮಾತ್ರ ಸೇರಿಸಲಾಗುವುದು ಎಂಬ ಶರತು ಏನಾದರೂ ಮದ್ರಾಸಿನವರಿಂದೆ ಇದೆಯೋ?

ಕಾಫಿ ತೋಟ ಒಂದಕ್ಕಲ್ಲದೆ ಈ ತರ ಎಲ್ಲಾ ವ್ಯವಸಾಯದ ಜಮೀನುಗಳಿಗೂ ಕೊಡಗಿನ ಹೊರಗೆ ಏಕರು ಒಂದಕ್ಕೆ 10 ರಿಂದ 14 ರೂಪಾಯಿ ತೆರುತ್ತಿದ್ದಾರೆ. ಮಹಾತ್ಮ ಗಾಂಧಿಯವರ ಆಶ್ರಮದ ಜಾಗಕ್ಕೆ ಏಕರು 1 ಕ್ಕೆ 10 ರೂಪಾಯಿ ಕಂದಾಯವಿದೆಯಂತೆ. ದೇಶದ ಆಯ, ವ್ಯಯಗಳು ಸರಿ ಇಲ್ಲದೆ ಬೇರೆ ದೇಶದೊಂದಿಗೆ ಸೇರಬೇಕೆಂತಾದರೆ ವ್ಯಯಕ್ಕೆ ಸರಿಯಾದ ಆದಾಯವನ್ನು ಹೆಚ್ಚಿಸಬೇಡವೇ? ಆದಾಯವನ್ನು ಹೆಚ್ಚಿಸಲು ಭೂಕಂದಾಯವನ್ನು ಹೆಚ್ಚಿಸುವ ದಾರಿ ಒಂದೇ ಇಲ್ಲವೇ ಈಗಿನ ಸ್ಥಿತಿಯಲ್ಲಿ ಉಳಿದಿರುವುದು. ಕಂದಾಯ ಹೆಚ್ಚು ಮಾಡುವಂತಾದರೆ ಮನ್ರಾಸಿನೊಂದಿಗೆ ಯಾಕೆ ಸೇರಬೇಕು? ನಮ್ಮ ಆಲಾಯಿದ ಇರಲಾಗುವುದಿಲ್ಲವೇ? ಕಂದಾಯ ಕಮ್ಮಿ ತೆರುತ್ತಿರುವ ನಮಗೆ ನಮ್ಮ ದೇಶದ ಆಡಳಿತ ನಡೆಸಲು ಹಣ ಸಾಲದಿದ್ದರೆ ಮದ್ರಾಸಿನೊಂದಿಗೆ ಸೇರಿದರೆ ಆ ಸರ್ಕಾರವು ವರ್ಷ ವರ್ಷ ಎಂದೆಂದಿಗೂ ನಮಗೆ ಖರ್ಚಿಗೆ ಹಣ ಸಹಾಯ ಮಾಡುವರೋ? ಇದು ಈಗ ಮದ್ರಾಸಿನಲ್ಲಿರುವ 22 ಜಿಲ್ಲೆಗಳಲ್ಲಿ ನಡೆಯುತ್ತಿದೆಯೇ? ಮದ್ರಾಸಿನೊಂದಿಗೆ ಇರಲು ಇಷ್ಟಪಡದೆ ಆಂಧ್ರರು ಹೋಗಬಯಸುವಾಗ ನಾವೇಕೆ ಮದ್ರಾಸಿಗೆ ಸೇರಲು ಹಂಬಲಿಸಬೇಕು. ತಲೆಭಾರದ ಆಡಳಿತ ಸರಿಪಡಿಸಲು ಯೂ ಹೆಚ್ಚಿನ ರಾಜಕೀಯ ಸುಧಾರಣೆಗೆ ನಾವೇಕೆ ಎಲ್ಲರಂ ಹೋರಾಡಬಾರದು?

ಇಡೀ ದೇಶದ ಅಭಿಪ್ರಾಯವನ್ನು ಅರಿತ ವಿನಹ ಘನ ಸರ್ಕಾರದವರು ಹಲ ಕೆಲವು ಜನರು ಯೂ ಕೋಮಿನವರು ಮಾಡಿದ ತೀರ್ಮಾನಕ್ಕೆ ಒಪ್ಪಿಗೆ ಕೊಡಬಾರದಾಗಿ ಸರಕಾರದವರನ್ನು ಕೇಳಿಕೊಳ್ಳುವದಾಗಿದೆ.

ಪಿ. ಯಂ.

ದೇವದತ್ತ.

ಸಾಮಾಜಿಕ ಕಾದಂಬರಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಅಧ್ಯಾಯ ೧೩.

'ನಾಡ ಬಡವರ ಸೂತಂತಿರಲಿ, ವಿದ್ಯಾವಂತರೂ, ಐಶ್ವರ್ಯವಂತರೂ ಆದ ತಂದೆ ತಾಯಿಗಳೂ ಸಹ ತಾವು ತಮ್ಮ ಮಕ್ಕಳ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳನ್ನು ಸರಿಯಾಗಿ ನೂಡುವುದಿಲ್ಲ. ಎಳೆ ಮಕ್ಕಳಿಗೆ ಬೇಕಾದ ತಿಂಡಿ ಪದಾರ್ಥಗಳೇನೊ ಮನೆಯಲ್ಲಿ ಬೇಕಾದಷ್ಟು ಇದ್ದು, ಆವುಗಳನ್ನು ಸಮಯಕ್ಕೆ ಸರಿಯಾಗಿ ಮಕ್ಕಳಿಗೆ ಕೊಡಲು ತಕ್ಕಷ್ಟು ಆಳುಗಳು ಇರುವವರಿಂದ ಆ ಮಕ್ಕಳಿಗೆ ಉಪಚಾರಗಳಲ್ಲಿ ಏನೊಂದೂ ಕೊರತೆ ಇರುವುದಿಲ್ಲ. ಆದರೆ ಈ ತಂದೆ ತಾಯಿಗಳು ತಮ್ಮ ಐಶ್ವರ್ಯಕ್ಕೂ, ಯೋಗ್ಯತೆಗೂ ಸರಿಯೊದ ರೀತಿಯಲ್ಲಿ ಸ್ವಸುಖಾಭಿಲಾಷೆಯಲ್ಲಿ ಮಗ್ನರಾಗಿ, ಮುಂದಕ್ಕೆ ಅಭಿವೃದ್ಧಿಯೂಗತಕ್ಕ ತಮ್ಮ ಮಕ್ಕಳನ್ನು ಸರಿಯೂದ ರೀತಿಯಲ್ಲಿ ತರಬೇತು ಮಾಡುವುದಿಲ್ಲ. ವಾಡಿಕೆಯ ಮೇರೆ ಅವರನ್ನು ಸಯಸ್ಸು ಬಂದೊಡನೆ 'ವಿದ್ಯಾರ್ಜನೆಗೆ ಕಳುಹಿಸುತ್ತಾರೆ. ಆದರೆ ಯಾವ ರೀತಿಯಲ್ಲಿ ಅವರಿಗೆ ವಿದ್ಯೆ ಕಲಿಸ ಬೇಕೆಂಬ ತೊಂದರೆಯನ್ನು ಅಪರು ಸ್ವಲ್ಪವೂ ತೆಗೆದುಕೊಳ್ಳುವುದಿಲ್ಲ. ನಮ್ಮ ಪೂರ್ವಜರು, ಸ್ತ್ರೀಯು ಗರ್ಭಿಣಿಯೂಗಿರುವಾಗಲೇ ವೀರ ಪುರುಷರ ಸಚ್ಚರಿತ್ರೆಗಳನ್ನು ಕಥಾ ರೂಪದಲ್ಲಿ ಹೇಳುತ್ತಿದ್ದರು. ಮಗುವು ಹುಟ್ಟಿ ಸ್ವಲ್ಪ ದೊಡ್ಡವನಾದ ಕೂಡಲೇ ಲೋಕದಲ್ಲಿ ಮಹತ್ತರವಾದ ಕೆಲಸಗಳನ್ನು ಸಾಧಿಸಿ, ಶಾಶ್ವತವಾದ ಕೀರ್ತಿಯನ್ನು ಸ್ಥಾಪಿಸಿದ ಮಹಾ ಸ್ತ್ರೀ ಪುರುಷರ ಚರಿತ್ರೆಗಳನ್ನು ಆವರಿಗೆ ಯಾವಾಗಲೂ ಇಂಪಾದ ರೀತಿಯಲ್ಲಿ ಹೇಳುತ್ತಾ ಆ ಎಳೆ ಮಕ್ಕಳ ಮನಸ್ಸಿನಲ್ಲಿ ಕೀರ್ತಿವಂತರಾಗ ಬೇಕೆಂಬ ಮಹಾ ಕಾಂಕ್ಷೆಯನ್ನು ಹುಟ್ಟಿಸುತ್ತಿದ್ದರು. ಈ ತರಹದ ಚಿಕ್ಕಂದಿನ ತರಬೇತೇ ಶಿವಾಜಿ, ಜೂಲಿಯಸ್ ಸೀಜರ್, ಹೆನಿಬಾವ್ ಮೊದಲಾದ ಮಹನೀಯರನ್ನು ಲೋಕೋತ್ತರವಾದ ಯಸಸ್ಸಿಗಳಾಗಿ ಮಾಡಿದ್ದು.'

'ಈಗಿನ ಕಾಲದಲ್ಲಿ ಅನೇಕ ಐಶ್ವರ್ಯವಂತರಾದ ತಾಯಿ ತಂದೆಗಳು ತಮ್ಮ ಮಕ್ಕಳನ್ನು ತಮ್ಮ ಸ್ವಂತ ಸುಖಾನುಭವಗಳಲ್ಲಿ ಅಡ್ಡ ಬರತಕ್ಕ ಕಂಟಕಿಗಳೆಂದು ಭಾವಿಸಿ ಆವರ ಗೊಡವೆಯನ್ನು ತಪ್ಪಿಸಲು ವಿದ್ಯಾರ್ಜನೆಯ ನೆಪದಿಂದ ದೂರದ ಶಾಲೆಗಳಿಗೆ ಕಳುಹಿಸಿಬಿಡುತ್ತಾರೆ. ಕೆಲವರು ತಮ್ಮ ಐಶ್ವರ್ಯದ ಮಹತ್ವವನ್ನು ಬಹಿರಂಗಪಡಿಸುವ ಕಾಂಕ್ಷೆಯಿಂದಲೂ, ತಮ್ಮ ಮಕ್ಕಳನ್ನು ಎಳೆ ವಯಸ್ಸಿನಲ್ಲೇ ದೂರದ ಶಾಲೆಗಳಿಗೆ ಕಳುಹಿಸಿಬಿಡುವುದು ಉಂಟು.

'ಅಯ್ಯಾ ಪ್ರಸಾದರೇ, ಲೋಕದಲ್ಲಿ ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ವಿದ್ಯೆಯನ್ನು ಆರ್ಜಿಸುವರೆಂದರೆ ಎಳೆ ರೋಗಿಗೆ ಔಷಧಿ ಕುಡಿಯುವುದಲ್ಲಿ ಎಷ್ಟು ಪ್ರೀತಿಯೂ, ಉತ್ಸಾಹವೂ ಇರುತ್ತದೋ ಆಷ್ಟೇ ಇರುತ್ತದೆ. ಆದರ ಬದಲು ಲೋಕದ ಅವಸ್ಥೆಯನ್ನೇ ತಿಳಿಯದ ಈ ಎಳೆ ಮಕ್ಕಳಿಗೆ ಪಂಚೇಂದ್ರಿಯಗಳಿಗೆ ಸುಖ ಕೊಡತಕ್ಕ ವಿಷಯ ಸುಖಗಳು ಬಹು ಮೋಹಕರವಾಗಿಯೂ, ಮನೋರಂಜಕವಾಗಿಯೂ ಕಾಣುತ್ತದೆ.'

'ಲೋಕದಲ್ಲಿ ಮಕ್ಕಳ ವಿಷಯದಲಿ ನಿಗತೆಗೆದುಕೊಳ್ಳಬೇಕಾದರೆ ತಾಯಿ ತಂದೆಗಳು ವಿದ್ಯೆ ಬುದ್ಧಿ ಐಶ್ವರ್ಯ ಮುಂತಾದವುಗಳಿಂದಲೂ ಅಷ್ಟರ ಮಟ್ಟಿಗೆ ಸಾಧ್ಯವಿಲ್ಲ. ಎಂಥಾ 'ಗುರು' ವಿಗೇ ಆಗಲಿ ಮೇಲಾಧಿಕಾರಿಗಳಿಗೇ ಆಗಲೀ ಇತರರ ಮಕ್ಕಳ ವಿಷಯದಲ್ಲಿ ಸಾಕಷ್ಟು ತೊಂದರೆ ತೆಗೆದುಕೊಳ್ಳಬೇಕೆಂಬ ನಿಗವಿರುವುದಲ್ಲ. ತಾವು ತೆಗೆದುಕೊಳ್ಳುವ ಸಂಬಳದ ಋಣಕ್ಕಾಗಿಯೂ, ಮೇಲಧಿಕಾರಿಗಳ ಹೆದರಿಕೆಯಿಂದಲೂ, ಆವರು ಖಾಯಿದೆಗೆ ಸರಿಯೂಗಿ ವಾಡಿಕೆಯೂದ ತೊಂದರೆಯನ್ನು ತೆಗೆದುಕೊಳ್ಳುತ್ತಾರೆ. ಆದರ ಮೇಲೂ ಪೂರ್ವಪರ ಯೋಚನೆ ಇಲ್ಲದ ಈ ಎಳೆ ಮಕ್ಕಳು ತಮ್ಮ ತಂದೆಗಳ ಐಶ್ವರ್ಯ ಗರ್ವದಿಂದಲೂ, ಮನರ್ಷಡತೆಯ ಸಂಗಾತಿಗಳ ಸಹವಾಸದಿಂದಲೂ, ಈ ಅಧಿಕಾರಿಗಳ ಆಪ್ಪಣೆಯನ್ನು ಉಲ್ಲಂಘಿಸಿ ನಡೆಯುವುದರಲ್ಲೇ ಅತ್ಯಂತ ಹರ್ಷ ವುಳ್ಳವರಾಗಿರುತ್ತಾರೆ.'

'ಹೀಗಿರುವಾಗ್ಯೆ ಲೋಕವ್ಯವಹಾರವನ್ನು ತಿಳಿಯದ ಸಣ್ಣ ಮಕ್ಕಳನ್ನು ದೂರದ ನಗರಗಳಲ್ಲಿರತಕ್ಕ ಶಾಲೆಗಳಿಗೆ ವಿದ್ಯಾರ್ಜನೆಗೆ ಕಳುಹಿಸುವ, ತಂಪೆ ತಾಯಿಗಳು ಆವರ ಪರಮ ಶತ್ರುಗಳೇ ಹೊರತು ಹಿತ ಚಿಂತಕರು ಎಂದೂ ಆಗಲಾರರು. ಅಷ್ಟು ರಸರಹಿತವಾದ ವಿದ್ಯೆಯನ್ನು ಗಳಿಸಲು ಎಳೆ ವಯಸ್ಸಿನಲ್ಲಿ ಯಾವ ವಿದ್ಯಾರ್ಥಿಗೂ ಮನಸ್ಸು ಇರುವುದಿಲ್ಲ. ತಂಪೆ ತಾಯಿಗಳ ಪ್ರೀತಿಯಿಂದಲೂ, ಜಾಗರೂಕತೆಯಿಂದಲೂ ಕಲಿಯಬೇಕೇ ಹೊರತು ವಿದ್ಯೆಯಲ್ಲಿ ಆಭಿರುಚಿಯಿಂದ ಕಲಿಯತಕ್ಕ ಮಕ್ಕಳು ಬಹಳ ವಿರಳರು. ಅಂತಿರುವಾಗ್ಯೆ ತಂಪೆ ತಾಯಿಗಳಿಂದ ಬಹು ದೂರದಲ್ಲಿದ್ದು, ಬೋರ್ಡಿಂಗ್ ಅಧಿಕಾರಿಗಳ ಕೈಕೆಳಗಿರತಕ್ಕ ಎಳೆಯ ವಯಸ್ಕರಾಗಿ ಲೋಕವ್ಯವಹಾರವನ್ನು ತಿಳಿಯದ ವಿದ್ಯಾರ್ಥಿಗಳ ಪಾಡೇನಾದೀತು? ಮೇಲಧಿಕಾರಿಗಳ ಹೆದರಿಕೆ ಇಲ್ಲ. ತಂಪೆ ತಾಯಿಗಳಿಗೆ ತಾವು ಮಾಡುವ ಕೆಲಸವು ತಿಳಿಯುವ ಹಾಗಿಲ್ಲ. ದುಷ್ಟ ಹುಡುಗರ ಸಹವಾಸ. ಕೇಳಿದಷ್ಟು ಹಣ ಮನೆಯಿಂದ ಬರುತ್ತಿದೆ. ತಾವು ಇರುವ ನಗರದಲ್ಲಿ ಪಂಚೇಂದ್ರಿಯಗಳಿಗೆ ಮಹತ್ತಾದ ಸುಖವನ್ನು ಕೊಡತಕ್ಕ ನೂರಾರು ವಿಷಯಸುಖಗಳಿಂದ ಕೂಡಿದ ಮನೆಗಳಿವೆ. ಕೈಯಲ್ಲಿ ಹಣವಿದು ಆದನ್ನು ಸರಿಯಾಗಿ ವ್ಯಯಮೂಡಲು ತಿಳುವಳಿಕೆ ಇಲ್ಲದೆ ಇರುವಾಗ ಬುದ್ಧಿ ಹೀನರಾದ ಆ ಮಕ್ಕಳ ಕರ್ಣಕ್ಕೂ, ನೇತ್ರಕ್ಕೂ, ಮನಸ್ಸಿಗೂ ಸರ್ವ ಸುಖ ಕೊಡತಕ್ಕ ವಿಷಯ ಸುಖಗಳನ್ನು ಹಿಂಬಾಲಿಸುವವರ ಬದಲು ರಸರಹಿತವಾಗಿ ಹಗಲಿರುಳು ಶ್ರಮ ಪಟ್ಟರೂ ಕೂಡ ಪೂರ್ತಿ ವಶೀಕರಿಸಲು ಅಸಾಧ್ಯವಾದ ವಿದ್ಯೆಯನ್ನು ಹಿಂಬಾಲಿಸಿಯೂರೇ?'

'ತಮ್ಮ ಮಕ್ಕಳೇ ಆಗಿ, ಆವರ ಮುಂದಿನ ಮಹತ್ವವು ತನುಗೆ ಸುಖವನ್ನೂ, ಆ ದೋಗತಿಯು ತಮಗೆ ದುಃಖವನ್ನೂ ತರುವಂತಿದ್ದರೂ ಸಹ ಈ ತಂದೆ ತಾಯಿಗಳು ಒಂದೆರಡಿರತಕ್ಕ ತಮ್ಮ ಮಕ್ಕಳ ವಿಷಯ ಸ್ವಲ್ಪ ತೊಂದರೆ ತೆಗೆದುಕೊಳ್ಳಲಾರದೆ ಇತರರ ಸಹಕೊಪ್ಪಿಸುವಾಗ್ಯೆ, ಇತರರ ಮಕ್ಕಳಾಗಿ ಆ ಮಕ್ಕಳ ಮುಂದಿನ ಜೀವಮಾನವು ತಮ್ಮನ್ನು ಯಾವ ರೀತಿಯಲ್ಲಿಯೂ ಬಾಧಿಸದಿರುವಾಗ ನೂರಾರು ಇದ್ದೂ ಅಧಿಕಾರಿಗಳನ್ನು ಉಲ್ಲಂಘಿಸಿ ನಡೆಯುವ ಈ ಮಕ್ಕಳ ವಿಷಯದಲ್ಲಿ ಬೋರ್ಡಿಂಗ್ ಅಧಿಕಾರಿಗಳು ಎಷ್ಟು ತಾನೇ ತೊಂದರೆ ತೆಗೆದಾರು? ಆದುದರಿಂದಲೇ ಎಳೆ ವಯಸ್ಸಿನಲ್ಲಿ ತಂಪೆ ತಾಯಿಗಳ ಹತೋಟಿಯೀದ ಹೊರಗಾಗಿ, ದೂರದ ಪಟ್ಟಣದ ಶಾಲೆಗಳಲ್ಲಿ ವಿದ್ಯಾರ್ಜನೆಗೆ ಹೋಗುವ ಯುವಕರಲ್ಲಿ ಪೈಕಿ ಮುಕ್ಕಾಲು ಪಾಲು ಹುಡುಗರು, ವಿದ್ಯೆಯನ್ನೇನೂ ಗಳಿಸದೆ, ತಮ್ಮ ನಡತೆ ನೀತಿಗಳನ್ನೂ, ಕೆಲವೇಳೆ ಶಾರೀರ ದಾರ್ಢ್ಯವನ್ನೂ ಸಹ ಕಳೆದುಕೊಂಡು, ಅಜಾಗರೂಕರಾದ ತಮ್ಮ ಹೆತ್ತವರಿಗೆ ಅನಂತವಾದ ಮುಖವನ್ನೂ, ವಂಶಕ್ಕೆ ಕಳಂಕವನ್ನೂ, ತಾವು ಹುಟ್ಟಿದ ದೇಶಕ್ಕೆ ಕೆಡುಕನ್ನೂ ತರುವವರಾಗಿರುತ್ತಾರೆ.'

ತಂಪೆ ತಾಯಿಗಳು ಮುಖ್ಯವಾಗಿ ತಿಳಿಯಬೇಕಾದದ್ದೇನಂದರೆ 'ತಮಗೆ ಒಂದೇ ಒಂದು ಮಗುವು ಚ್ಞನಿಸಿತೆಂದರೆ ಆ ದಿವಸದಿಂದ ಅವರೆ ಆತ್ಮ ಸುಖದಲ್ಲಿ ಅರ್ಧಕ್ಕೆ ತಿಲಾಂಜಲಿ ಕೊಟ್ಟಂತಾಯಿ'ತೆಂದು. ತಮ್ಮ ಜೀವಮಾನದಲ್ಲಿ ಇನ್ನು ಅರ್ಧ ಭಾಗವನ್ನು ಈ ಮಗುವಿನ ಸಲುವಾಗಿ ಕಳೆಯಬೇಕು. ಇನ್ನು ಮೊದಲಿನ ಹಾಗೆ ಆತ್ಮ ಸುಖದಲ್ಲಿ ಸಂಪೂರ್ಣ ಮುಳುಗಿರಲು ಆಗುವದಿಲ್ಲ. ಹಾಗೆ ತಮ್ಮ ಆತ್ಮ ಸುಖದಲ್ಲೇ ಮಗ್ನರಾಗಬೇಕೆಂಬ ಕಾಂಕ್ಷೆಯೆನ್ನು ಅವರಿಗಿದ್ದ ಪಕ್ಷದಲ್ಲಿ ಅವರು ಮಕ್ಕಳನ್ನು ಹಡೆಯದೆ ಇರತಕ್ಕ ಸಾಧನವನ್ನು ಕೈಕೊಳ್ಳಬೇಕು. ಆದರ ಬದಲು ತಾವು ಹುಟ್ಟಿಸುವವರೆಗೆ ಆ ಮಗುವು ವಿದ್ಯಾಬುದ್ಧಿ ಕಲಿತು ಲೋಕವ್ಯವಹಾರವನ್ನು ಅರಿಯುವವರೆಗೆ ತಮ್ಮ ಸ್ವಂತ ಹೆತೋಟಿಯಲ್ಲಿಟ್ಟು, ಸಲಹಿ, ಆ ನೋಲೆ ಅವನನ್ನು ಹೊರಗೆ ಕಳುಹಿಸಬೇಕು.

'ಪ್ರಸಾದರೇ ನಾನಿಷ್ಟೆಲ್ಲಾ ಹೇಳುತ್ತಿರಲಿಲ್ಲ. ಮೊನ್ನೆ ದಿವಸ ನಾನು ರಾಜಧಾನಿಗೆ ಹೋಗಿ, ನಿನ್ನೆ ಮರಳಿ ಬಂದೆನು. ನಿಮ್ಮ ಮಗನನ್ನು ಕಾಣಲಿಲ್ಲವಾ ವರೂ ಅವನ ವಿಷಯ ಹೆಡ್ ಮಾಸ್ಟರರು ಹೀಗೆ ಹೇಳಿದರು-'ಈ ವರ್ಷವೂ ಅವನಿಗೆ ಸೆಲೆಕ್ಷನ್ ಸಿಕ್ಕಿರುವುದಲ್ಲವಂತೆ. ಆದಕ್ಕಾಗಿ ಅವನು ಕಳೆದ ಶುಕ್ರವಾರ ರಾತ್ರಿ ಗಣಿತ ಶಿಕ್ಷಕರ ಮನೆಗೆ ಗುಪ್ತವಾಗಿ ಹೋಗಿ ಅವರನ್ನು ಹೊಡೆಯಲು ಹೋದನಂತೆ. (ಪ್ರಸಾದರ ಕಣ್ಣುಗಳಿಂದ ಆಶ್ರು ಜಲವು ಹನಿ ಹನಿಯೂಗಿ ಸುರಿಯಲಾರಂಭಿಸಿತು) ಈ ರಹಸ್ಯವನ್ನು ಮೊದಲೇ ತಿಳಿದಿದ್ದ ಶಿಕ್ಷಕರು ಪೋಲೀಸ್ ಸಹಾಯದಿಂದ ಅವನನ್ನು ಕೈದು ಮಾಡಿಸಿದರು. ವಿದ್ಯಾರ್ಥಿಯೊಬ್ಬನುದರಿಂದ ಮೂರಣೆ ದಿನಸ. ಅವನನ್ನು ಹೆ. ಮಾಸ್ಟರರ ಪಶಕೊಪ್ಪಿಸಲು ಅವರು ಅವನನ್ನು ಶಾಲೆಯಿಂದ ಹೊರಗಾಕಿರುವರು.

'ಆಯ್ಯೋ ನನ್ನ ಆಪೃಷ್ಟವೇ! ಹುಡುಗನು ರಾಜಧಾನಿಯಲ್ಲಾದರೂ ಇರುವನೇ? ತನಗುಂಟಾದ ಆಪಮಾರ್ಯದೆಗೋಸ್ಕರ ಏನಾದರೂ ಆತ್ಮಕ್ಕೆ ಬೆಂದುಕೊಂಡಾನಲ್ಲಾ! ದೇವರೇ! ಅವನನ್ನೂ ನ್ನೆ ನನ್ನ ಮನೆ ಸೇರಿಸು. ಅವನಿಗೆ ವಿದ್ಯೆಯೇ ಬೇಡ. ಮನೆಯಲ್ಲಿರುವುದೇ ಸಾಕು. ನಾನೇತಕ್ಕೆ ಅವನನ್ನು ಕಳುಹಿಸಿದೆನು. ಆಯ್ಯೋ, ಈಗ ಏನು ಮಾಡಲಿ?' ಎಂದು ಪ್ರಸಾದರು ಅಳುತ್ತಾ ಕೇಳಿದರು.

'ಛೀ ನಾಚಿಕೆಯಿಂದ ಇಲ್ಲಿ ಮುಖ ತೋರಿಸುವುದು ಹೇಗೆಂದು ಯೋಚಿಸಿಯೇ ಅವನು ಫ್ಲಿಲ್ಲಿಯಾದರೂ ಓಡಿ ಹೋಗಲು ಈ ರೀತಿ ಉಪಾಯದ ಪತ್ರವನ್ನು ಬರೆದಿರುವನು. ನೀವು ಅವನು ಬರೆದ ಹಾಗೆ ಹಣ ಕಳುಹಿಸಬೇಡಿ. ನಾನು ಅವನನ್ನು ಉಪಾಯದಿಂದ ಫ್ಲುನೆಗೆ ಕರ್ತರುತ್ತೇನೆ. 'ನಿಮ್ಮ ಮೇಲೆ ಆಕಸ್ಮಾತ್ತಾಗಿ ಮೋಟಾರು ಬಂಡಿಯು ಬಿದ್ದು ಪ್ರಾಣ ಉಳಿಯುವ ಭರವಸೆ ಇಲ್ಲ. ಆದುದರಿಂದ ವಡನೆ ನೀನು ಹೊರಡು' ಎಂಬುದಾಗಿ ಟೆಲಿಗ್ರಾಂ ಮಾಡಿ ದಾರಿ ಖರ್ಚಿಗೆ ಸಾಕಷ್ಟು ಹಣ ಕಳುಹಿಸುವ. ಎಂಬದಾಗಿ ಆ ತಿಥಿಯು ಹೇಳಿದನು.

ಧನವಂತ-'ಹೇಗಾದರೂ ಸರಿಯೆ, ಅವನ್ನೊನ್ನೆ ಜೀವ ಸಹಿತ ನನ್ನ ಮನೆಗೆ ಮುಟ್ಟಿಸಿದರೆ ಸಾಕು.'

ಇಬ್ಬರೂ ಎದ್ದು ಪೋಸ್ಟಾಫೀಸಿಗೆ ಹೊರಟು ಹೋದರು.

[ಸಶೇಷ.]

ಎಂಬ್ರೋಸಿಯೂ,

ಸಾವಿರಾರು ಹೆಂಗಸರ ಕಾಯಿಲೆಗಳನ್ನು ನಿವಾರಿಸಿದೆ.

ಹೆಸರುವಾಸಿಯೂದ ಡಾಕ್ಟರುಗಳಿಂದಲೂ, ಉಪಯೋಗಿಸಿ ತೃಪ್ತಿಗೊಂಡವರಿಂದಲೂ ಎಂಬ್ರೋಸಿಯೂವು ಹೆಂಗಸರ ರೋಗಗಳಿಗೆ ಹೆಸರುಗೊಂಡಿದೆ.

ಬಾಟ್ಲಿಗೆ ರೂ. 2-0-0.
ಸಣ್ಣ ಬಾಟ್ಲಿಗೆ ಆ. 0-15-0.
ಸೋಲ್ ಏಜೆಂಟ್-ವಿ. ರಾಮು & ಕೋ, ಬೋಂಬೆ 2.

ವೇದಾಂತ ಸಂಘ, ಮಡಿಕೆರಿ.

ನವಂಬರ್ ತಾರೀಕು 13 ನೇ ಭಾನುವಾರ ಸಂಘದ ಮಹಾ ಸಭೆಯಲ್ಲಿ ಸಂಘದ ವಾರ್ಷಿಕ ವರದಿಯನ್ನು ಕಾರ್ಯದರ್ಶಿಯವರು ಓದಿದ್ದರ ಸಂಕ್ಷೇಪ ವಿವರ.

ಮಡಿಕೇರಿಯ ವೇದಾಂತ ಸಂಘವು ಸ್ಥಾಪಿತವಾಗಿ 22 ವರ್ಷಗಳು ಕಳೆದೆ ಈಗ ಅದು 23 ನೇ ವರ್ಷದ ವ್ಯವಹಾರವನ್ನು ನಡೆಸುತ್ತಾ ಇದೆ. ಇದರ ಆಡಳಿತವು ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು ಒಬ್ಬ ಕಾರ್ಯದರ್ಶಿಯವರು ಒಬ್ಬ ಖಜಾನ್ಜಿಯವರು ಮತ್ತು ನಾಲ್ವರು ಸದಸ್ಯರಿಂದೊಡಗೂಡಿದ್ದ ಕಾರ್ಯ ಕಾರ್ಯಕಾರಿ ಮಂಡಲಿಯವರಿಂದ ನಡೆಯುತ್ತಾ ಇದೆ. ಶ್ರೀಮಾನ್ ಸಿ. ಯಂ. ದೇವಯ್ಯನವರು ಸಂಘದ ಅಧ್ಯಕ್ಷಸ್ಥಾನಕ್ಕೆ ಮಹಾಸಭೆಯಿಂದ ಆರಿಸಲ್ಪಟ್ಟರು. ಈ ಸಂಘಕ್ಕೆ 160 ಸದಸ್ಯರಿದ್ದಾರೆ. ಕಾರ್ಯಕಾರಿ ಮಂಡಲಿಯವರು 1937 ನೇ ಆಗಸ್ಟ್ ತಿಂಗಳಿಂದ 1938 ನೇ ಅಕ್ಟೋಬರ್ ಆಖೈರೊಳಗೆ ಒಂಬತ್ತು ಸಭೆ ಜರಗಿಸಿದರು.

ಸಂಘದ ಭಂಡವಾಳ.

ವರದಿ ವರ್ಷಕ್ಕೆ ಜಮ	1041–7–6
ಖರ್ಚು	1082–9–8
ಜಮಕ್ಕಿಂತ ಹೆಚ್ಚು ಖರ್ಚು	41–2–2
ಸಂಘಕ್ಕೆ ನಿಂತಿರುವ ಸಾಲ	100–0–0
	141–2–2
ಸಂಘಕ್ಕೆ ಪ್ರೊನೋಟು ಮೇಲೆ ಬರಬೇಕಾದ ಹಣ	100–0 0

ಪುಸ್ತಕ ಭಂಡಾರ.

ಸಂಘದ ಪುಸ್ತಕ ಭಂಡಾರದಲ್ಲಿ 500 ಪುಸ್ತಕಗಳ ಮೇಲ್ಪಟ್ಟು ಇವೆ. ಪುಸ್ತಕ ಭಂಡಾರಕ್ಕೆ ಕೊಡಗು ಕಮಿಷನರ್ ಸಾಹೇಬರು ಡಿಸ್ಕ್ರಿಷನರಿ ಗ್ರಾಂಟಿನಿಂದ 50 ರೂಪಾಯಿಗಳನ್ನು ಉಚಿತಾರ್ಥವಾಗಿ ಕೊಟ್ಟರು.

1. ಶ್ರೀಮತಿ ಕೋದಾಂಡ ಮಿಸಸ್ ಡಾಕ್ಟರ್ ಸಂಜಪ್ಪನವರು ಭಾಗವತ, ರಾಮಾಯಣ ಮತ್ತು ಮಹಾ ಭಾರತದ 4 ಪರ್ವಗಳನ್ನು ದಾನಮಾಡಿದರು.

2. ಶ್ರೀಮಾನ್ ಕೇಶವದಾಸರು ಕರ್ನಾಟಕ ಭಕ್ತವಿಜಯವೆಂಬ ಪುಸ್ತಕವನ್ನು ದಾನಮಾಡಿದರು.

3. ಶ್ರೀಮಾನ್ ಕರ್ಣಿಕ ಎ. ಸಿ. ಸುಬ್ಬಯ್ಯನವರು ಗೀತೆಯ ಗೂಡಾರ್ಥದೀಪಿಕೆ ಎಂಬ 2 ದೊಡ್ಡ ಪುಸ್ತಕಗಳನ್ನು ದಾನ ಮಾಡಿದರು.

ಕಾರ್ಯಕಲಾಪಗಳು.

ಪ್ರತಿ ಶನಿವಾರ ಸಂಘದ ಮಂದಿರದಲ್ಲಿ ಭಜನೆ ನಡೆಯುತ್ತಿತ್ತು.

ಶ್ರೀರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಮತಾಚಾರ್ಯರ ಸಾಧುಸಂತರ ಜಯಂತಿ ಉತ್ಸವಗಳು ಜರಗಿದವು. ಆಲ್ಲದೆ ನವರಾತ್ರಿ ಉತ್ಸವಗಳು ನಡೆದವು. ಉತ್ಸವಾದಿಗಳಲ್ಲಿ ಹಿಂದೂ ಧರ್ಮದ ವಿಷಯವಾಗಿ ಉಪನ್ಯಾಸಾದಿಗಳು ಮತ್ತು ಹರಿಕಥೆಗಳು ಸಹ ನಡೆದವು. ಶ್ರೀ ಗೀತಾಜಯಂತಿ ಉತ್ಸವದಲ್ಲಿ ಭಗವದ್ಗೀತಾ ಪಠನ ಸ್ಪರ್ಧೆ ನಡೆದು ಅದರಲ್ಲಿ ತೇರ್ಗಡೆ ಹೊಂದಿದವರಿಗೆ ಪುಸ್ತಕಗಳನ್ನು ಇನಾಮಾಗಿ ಹಂಚಲ್ಪಟ್ಟವು. ವಾರಕ್ಕೆ ಮೂರಾವರ್ತಿ ಶ್ರೀಮಾನ್ ಓಡ್ಲುಮನೆ ಆತ್ಮಾರಾಮಶಾಸ್ತ್ರಿಗಳು ಸಂಘದ ಮಂದಿರದಲ್ಲಿ ಭಾಗವತ ಪ್ರವಚನ ಮಾಡುತ್ತಿದ್ದಾರೆ.

ಸಂಘಕ್ಕೆ ಪ್ರೋತ್ಸಾಹ.

ಶ್ರೀಮಾನ್ ಮಂಡೇಪಂಡ ಸುಬ್ಬಯ್ಯನವರು 50 ರೂಪಾಯಿ ಕ್ರಯ ಬಾಳುವ ಒಂದು ಹೊಸ ಗಡಿಯಾರವನ್ನು ದಾನಮಾಡಿರುತ್ತಾರೆ. ಶ್ರೀಮತಿ ಜೇಂದ್ರಿ ಮಾಡ ಬೊಳ್ಳವ್ವನವರು ಒಂದು ಬೆಳ್ಳಿಯ ಕುಂಕುಮ ಡಬ್ಬಿಯನ್ನು ದಾನಮಾಡಿರುತ್ತಾರೆ.

ಶ್ರೀಮತಿ ಕುಟ್ಟೀಟೀರ ಮಿಸಸ್ ಕಾರ್ಯಪ್ಪನವರು ಒಂದು ಹೊಸ ಬೆಂಚನ್ನು ದಾನಮಾಡಿರುತ್ತಾರೆ.

ಶ್ರೀಮಾನ್ ಮುಕ್ಕಾಟೀರ ಅಪ್ಪಣ್ಣನವರು ಸಂಘಕ್ಕೆ ಒಂದು ಬಾವಿಯನ್ನು ತೋಡಿಸಿ ಕೊಡುವದಾಗಿ ಕಳೆದ ಸಂತ್ಸರವೇ ವಾಗ್ದಾನ ಮಾಡಿರುತ್ತಾರೆ. ಆ ಕೆಲಸವನ್ನು ಈ ಬರುವ ಬೇಸಿಗೆಯಲ್ಲಿ ಮಾಡಿಕೊಡುವದಾಗಿ ವಾಗ್ದಾನ ಮಾಡಿರುತ್ತಾರೆ.

ಈ ಸಂಸ್ಥೆಯ ಮುಂದಿನ ಕಾರ್ಯಕ್ರಮ.

ಸನಾತನ ಧರ್ಮದ ಆಚರಣೆ, ಪ್ರಚಾರ ಮತ್ತು ಪಾಲನೆ ಕಾರ್ಯದಲ್ಲಿ ಸರ್ವರೂ ಶ್ರಮ ಸಹಿಸಬೇಕಾಗಿದೆ. ಆದ ಪ್ರಯುಕ್ತ ಸಂಘದ ಪುಸ್ತಕ ಭಂಡಾರವನ್ನು ಅಭಿವೃದ್ಧಿಗೊಳಿಸಬೇಕು. ಸಂಘವು ಒಂದು ಮಾಸ ಪತ್ರಿಕೆಯನ್ನು ಹೊರಡಿಸಬೇಕು. ಈ ಕಾರ್ಯಕ್ಕೆ ಒಂದು ಸಣ್ಣ ಛಾಪಖಾನೆಯು ಏರ್ಪಾಡಾಗಬೇಕು.

ಹರಿಕಥೆ–ಸಂಗೀತ ನಿಧಿಯನ್ನು ಏರ್ಪಡಿಸಿ ವಿದ್ಯಾನಂತರಾದ ಹರಿದಾಸರಿಂದಲೂ, ಸಂಗೀತ ವಿದ್ವಾನರಿಂದಲೂ ಆತ್ಮೋನ್ನತಿಯ ವೃದ್ಧಿಯನ್ನೂ ಹೆಚ್ಚಿಸಬೇಕು.

ಸಂಘದ ಮಂದಿರವು ಸಣ್ಣದಾದರಿಂದ ಉತ್ಸವಾದಿಗಳಲ್ಲಿ ಸಭೆ ಸೇರಲು ಜನರಿಗೆ ಅನಾನುಕೂಲವಾಗಿರುವದರಿಂದ ಅದನ್ನು ಬಡಾಯಿಸಬೇಕು. ಇವೇ ಮೊದಲಾದ ಸೂಚನೆಗಳನ್ನು ಕೊಟ್ಟು ಸಂಘದ ಸೇವೆಯಲ್ಲಿ ಕಾರ್ಯನರ್ವಿಯವರಿಗೆ ಸಹಾಯ ಮಾಡಿದ ಸರ್ವರಿಗೂ ಮತ್ತು ಸಂಘಕ್ಕೆ ಗಡಿಯಾರ ಪುಸ್ತಕ ವಗೈರೆಗಳನ್ನು ದಾನ ಮಾಡಿದವರಿಗೂ ಮತ್ತು ಶ್ರೀಮಾನ್ ಓಡ್ಲುಮನೆ ಆತ್ಮಾರಾಮ ಶಾಸ್ತ್ರಿಗಳ ಭಾಗವತ ಪ್ರವಚನಾದಿ ಧರ್ಮಕಾರ್ಯಗಳಿಗೂ ನಾವು ಚಿರಋಣಿಗಳಾಗಿರಬೇಕೆಂಬದಾಗಿಯೂ ಮತ್ತು ಅವರೆಲ್ಲರಿಗೂ ತನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ ಇನ್ನು ಮುಂದಕ್ಕೂ ಸಂಘದ ಸೇವೆಯನ್ನು ನೆರವೇರಿಸಲು ನಮಗೆಲ್ಲರಿಗೂ ಶ್ರೀ ರಾಮಕೃಷ್ಣ ಪರಮಹಂಸರು ಶಕ್ತಿಯನ್ನು ಅನ್ಯೋನ್ಯ ಪ್ರೇಮಭಾವವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿ ಕಾರ್ಯದರ್ಶಿಯವರು ತನ್ನ ವರದಿಯನ್ನು ಮುಕ್ತಾಯಗೊಳಿಸಿದರು.

ತದನಂತರ ಮಹಾ ಸಭೆಯವರು ದಾನಾದಿಗಳಿಂದ ಸಂಘಕ್ಕೆ ಪ್ರೋತ್ಸಾಹ ಕೊಟ್ಟ ಎಲ್ಲಾ ಮಹನೀಯರಿಗೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಆವರಿಗೆ ಪತ್ರ ಮೂಲಕ ಅರ್ಪಿಸಬೇಕಾಗಿ ತೀರ್ಮಾನ ಮಾಡಿದರು.

ಪುಸ್ತಕ ಭಂಡಾರಕ್ಕೆ ದ್ರವ್ಯ ಸಹಾಯ ಮಾಡಬೇಕಾಗಿ ತೀರ್ಮಾನಮಾಡಿದರು. ಕಾರ್ಯದರ್ಶಿಯರ ಇತರ ಸೂಚನೆಗಳನ್ನು ಮುಂದಕ್ಕೆ ಆಲೋಚಿಸುವ ಹಾಗೆ ತೀರ್ಮಾನಮಾಡಿದರು.

ಸಂಘದ ಸದಸ್ಯರೆಲ್ಲರೂ ತಮ್ಮ ಚಂದಾ ಮೊಬಲಗನ್ನು ಮತ್ತು ಬಾಕಿ ನಿಂತಿರುವ ಚಂದಾ ಮೊಬಲಗನ್ನು ದಯವಿಟ್ಟು ಜಾಗ್ರತೆಯಾಗಿ ಪಾವತಿಮಾಡಬೇಕಾಗಿ ತೀರ್ಮಾನಮಾಡಿದರು.

ಮುಂದಿನ ಸಂವತ್ಸರದ ಆಡಳಿತೆಗೆ ಈ ಕೆಳಗಿನ ಕಾರ್ಯಕಾರಿ ಮಂಡಳಿಯನ್ನು ನೇಮಕಮಾಡಿದರು. ಶ್ರೀ ಸಿ. ಯಂ. ದೇವಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಸಿ. ಯಂ. ರಾಮರಾಯರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಜಿ. ಸುಬ್ಬಯ್ಯನವರನ್ನು ಗೌರವ ಕಾರ್ಯದರ್ಶಿಯನ್ನಾಗಿಯೂ ಮತ್ತು ಕಾರ್ಯಕಾರಿ ಮಂಡಳಿಯವರಾಗಿ ಶ್ರೀ ಗಳಾದ ಯಂ. ಎಸ್. ಅನಂತಪದ್ಮನಾಭರಾಯರು, ಎಂ. ವೈ. ಎಸ್. ಮಾದಪ್ಪನವರು, ಬಿ. ಎಸ್. ಶ್ರೀನಿವಾಸಮೂರ್ತಿಯವರು, ಬಿ. ಕೆ. ಸುಬ್ಬರಾಯರು ಮತ್ತು ಕೆ. ಯಂ. ಬೆಳ್ಯಪ್ಪನವರನ್ನು ಚುನಾಯಿಸಲಾಯಿತು.

ನಂತರ ಅಧ್ಯಕ್ಷರಿಗೂ, ಸಂಘದ ಸೇವೆಯಲ್ಲಿ ಭಾಗ ವಹಿಸಿದ ಎಲ್ಲಾ ಮಹನೀಯರಿಗೂ ವಂದನಾರ್ಪಣಾನಂತರ ಸಭೆಯು ಮುಕ್ತಾಯವಾಯಿತು.

ಜಿ. ಸುಬ್ಬಯ್ಯ,
(ಗೌ. ಕಾರ್ಯದರ್ಶಿ)

—೦೦—

ಧಾತು ಪುಷ್ಟಿ ಲೇಹ.

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ.

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್.

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಜೀಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ವಿ. ಬಿ. ಕಾಮತ್, ಮಡಿಕೇರಿ. (3) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (5) ಸುಂದರ್ ಪ್ರಭು, ಸುಳ್ಯ. (6) ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು. [15]

—೦೦—

ಮೊರಾಟಕ್ಕೆ.

ಜೇನು ಪೆಟ್ಟಿಗೆಯ ಒಳಗಿಡುವ ಚಾಕಟ್ಟುಗಳು–8 ದೊಡ್ಡವು–8 ಚಿಕ್ಕವುಗಳು ಬರೇ ಒಂದು ರೂಪಾಯಿಗೆ ಮಾರಲ್ಪಡುತ್ತಿದೆ.

ಎರಿಗಳು ಜೇನು ತುಂಬಿದ್ದು ಬೆಸಿಗೆದ್ದರೆ ಒಳ್ಳೇ ಬೆಲೆಗೆ ಕೊಂಡುಕೊಳ್ಳಲಾಗುವುದು.

ಜೇನು ಮತ್ತು ಮೇಣ ಸಹಕಾರಿ ಸಂಘ, ವೀರಾಜಪೇಟೆ.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ವಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಅತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52-23 ಬೆಂಗಳೂರು ಸಿಟಿ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಣಕಂಪನಿ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.
ಮತ್ತು ಕಂಪೆನಿ,
(52-51) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರ ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತವ್ಯನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ನಾಣಪ್ಪನವರು ಮತ್ತು ಮೆ. ಜೆ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಬಿಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟುಆದ ರಶೀತಿ ಕೊಂಡಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಮಾಡಿದ ಉದ್ಯೋಗ — ರೂ. 2,53,15,500.
1937 ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ [illegible] ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2[illegible] ರಂತೆಯೂ ಬೋನಸು ಹಂಚಲ್ಪಟ್ಟಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.
52-38

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲು ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ನೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನಿಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂಪರಿಂದ ಎರಡು ಔನ್ಸುಗಳ ವರೆಗೆ ಒಮ್ಮತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

20 ಸಿ. ಜೆಚ್. ರಾಮುಣ್ಣಿ ವೈದ್ಯರ್.

ಮೊರಾಟಕ್ಕೆ ತಯಾರಾಗಿವೆ.

ಸಹಕಾರ ಸಂಸ್ಥೆಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮುಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅನುಲ್ಲಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,800	0	0
ಜಮೂಬಂದ ಠೇವಣಾತಿ	– 2,44,140	6	4
ವಸೂಲಾದ ಕ್ಷೇಮನಿಧಿ	– 1,36,525	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 16,753	1	11
ತ್ರಿಪ್ಟ್ ಡಿವಾಜಿಟ್ಟು	– 35,550	2	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4½ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂಡ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ
ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು.
ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಅವ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

52-47

Printed & Published by P. I. Belliappa, at 'Kodagu' Press Mercara for 'Kodagu' Ltd.